

MAG(2) PRB/CR/70/2022-23

REG NO: KARKAN27951

# ಮುಂಜಾನೆ ವಾರ್ತೆ

ಇ-ಪೇಪರ್: www.munjaneevartheepaper.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ

Volume: 02 Issue: 94 | ಸಂಪುಟ: 02 | ಸಂಚಿಕೆ: 94 | ಪುಟಗಳು: 04 | munjanevarthe | 16 THURSDAY MAY 2024 | 16 ಗುರುವಾರ ಮೇ 2024 | ₹ 2



ಜಾಹೀರಾತಿಗಾಗಿ ಸಂಪರ್ಕಿಸಿ

9663122276

website: munjanevarthe.com


ಕೆರೆಗಳಲ್ಲಿ ಅಕ್ರಮ ಮಣ್ಣು ಸಾಗಾಟ ಮಾಡಿದರೆ ಸೂಕ್ತ ಕ್ರಮ ವಿವರಪುಟ 02

ಕಾಮಗಾರಿಯನ್ನು ನಿಲ್ಲಿಸುವಂತೆ ತುಮಕೂರಿನಲ್ಲಿ ಮೇ.16 ರಂದು ನಡೆಯುವ ಪ್ರತಿಭಟನೆ ವಿವರಪುಟ 03

ಜನರ ಏಳಿಗೆಗೆ ಶ್ರಮಿಸುವಂತಹ ಶಕ್ತಿ ಭಗವಂತ ನೀಡಲಿ ವಿವರಪುಟ 04

# ಸಿಎಎ: ಮೊದಲ 14 ಜನರಿಗೆ ಭಾರತೀಯ ಪೌರತ್ವ

ನವದೆಹಲಿ: ಭಾರಿ ಆಕ್ಷೇಪದ ಮಧ್ಯೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪೌರತ್ವ ತಿದ್ದುಪಡಿ ಕಾಯ್ದೆಯಡಿ (ಸಿಎಎ) ಮೊದಲ ಕಂತಿನಲ್ಲಿ 14 ಜನರಿಗೆ ಭಾರತೀಯ ನಾಗರಿಕತ್ವವನ್ನು ನೀಡಲಾಗಿದೆ. ಎಲ್ಲರಿಗೂ ಪೌರತ್ವ ಪ್ರಮಾಣಪತ್ರವನ್ನು ಬುಧವಾರ ವಿತರಿಸಲಾಯಿತು.

ಈ ಮೂಲಕ ಪಾಕಿಸ್ತಾನ, ಅಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶದಿಂದ ಕಿರುಕುಳಕ್ಕೊಳಗಾದ ಮುಸ್ಲಿಮೇತರ ವಲಸಿಗರಿಗೆ ಭಾರತೀಯ ರಾಷ್ಟ್ರೀಯತೆ ನೀಡುವ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ಅಧಿಕೃತ ಚಾಲನೆ ನೀಡಿದೆ. ದೆಹಲಿಯಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರು, 14 ಜನರು ಆನ್‌ಲೈನ್ ಮೂಲಕ ಸಲ್ಲಿಸಿದ್ದ ಅರ್ಜಿಗಳನ್ನು ಪರಿಶೀಲಿಸಿದ ನಂತರ ಭಾರತೀಯ ಪೌರತ್ವ ನೀಡಿದ



ಪ್ರಮಾಣಪತ್ರಗಳನ್ನು ಹಸ್ತಾಂತರಿಸಿದರು.

ಈ ಬಗ್ಗೆ ಮಾಹಿತಿ ನೀಡಿರುವ ಇಲಾಖೆ ವಕ್ತಾರರು, "ಪೌರತ್ವ ತಿದ್ದುಪಡಿ ಕಾಯ್ದೆಯಡಿ (ಸಿಎಎ) ನಾಗರಿಕತ್ವ ನೀಡುವ ಪ್ರಕ್ರಿಯೆ ಆರಂಭವಾಗಿದೆ. ಗೃಹ ಕಾರ್ಯದರ್ಶಿಗಳು ಅರ್ಜಿದಾರರಿಗೆ ಅಧಿಕೃತ ಪ್ರಮಾಣಪತ್ರ ನೀಡಿದ್ದಾರೆ. ಜಿಲ್ಲಾ ಮಟ್ಟದ ಸಮಿತಿಗಳು ಹಿರಿಯ ಅಂಚೆ ಅಧೀಕ್ಷಕರು/ಪೋಸ್ಟ್ ಅಧೀಕ್ಷಕರು ಗೊತ್ತುಪಡಿಸಿದ ಅಧಿಕಾರಿಗಳ ನೇತೃತ್ವದಲ್ಲಿ ದಾಖಲೆಗಳ ಪರಿಶೀಲನೆಯ ನಂತರ ಅರ್ಜಿಗಳನ್ನು ಅಖೈರು ಮಾಡಲಾಗಿದೆ" ಎಂದು ತಿಳಿಸಿದರು.

ಏನಿದು ಸಿಎಎ?: ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದಲ್ಲಿ ಕಿರುಕುಳಕ್ಕೊಳಗಾದ ಮುಸ್ಲಿಮೇತರ ವಲಸಿಗರು 2014ರ ಡಿಸೆಂಬರ್ 31ಕ್ಕೂ ಮೊದಲು ಭಾರತಕ್ಕೆ ಬಂದಿದ್ದಲ್ಲಿ ಅವರಿಗೆ ಭಾರತದ ನಾಗರಿಕತ್ವ ನೀಡಲು ಕೇಂದ್ರ ಸರ್ಕಾರ ಸಿಎಎ ಕಾಯ್ದೆ ಜಾರಿಗೆ ತಂದಿದೆ. 2019 ರಲ್ಲಿ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಇದರಲ್ಲಿ ಹಿಂದೂಗಳು, ಸಿಖ್ಖರು, ಜೈನರು, ಬೌದ್ಧರು, ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರು ಕಾಯ್ದೆಯಡಿ ಬರುತ್ತಾರೆ. ಮುಸ್ಲಿಮರಿಗೆ ಈ ಕಾಯ್ದೆಯಡಿ ಅವಕಾಶವಿಲ್ಲ.

2019ರಲ್ಲಿ ಜಾರಿಯಾದರೂ, ಅದರ ನಿಯಮಗಳನ್ನು ರೂಪಿಸಲು ಸರ್ಕಾರ 4 ವರ್ಷ ಸಮಯಾವಕಾಶ ತೆಗೆದುಕೊಂಡಿತು. 2024ರ ಮಾರ್ಚ್ 11 ರಂದು ಅಧಿಕೃತ ನಿಯಮಾವಳಿಗಳನ್ನು ರೂಪಿಸಿ ಆದೇಶ ಹೊರಡಿಸಿತು.

ಮುಸ್ಲಿಮೇತರ ಅರ್ಜಿದಾರರು ನಿಗದಿಪಡಿಸಿದ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಇವುಗಳನ್ನು ಜಿಲ್ಲಾ ಮಟ್ಟದ ಸಮಿತಿ (ಡಿಎಲ್‌ಸಿ), ರಾಜ್ಯ ಮಟ್ಟದ ಸಶಕ್ತ ಸಮಿತಿಯಿಂದ (ಇಸಿ) ಪರಿಶೀಲನೆ ಮಾಡಿದ ಬಳಿಕ ಪೌರತ್ವ ನೀಡಬೇಕೆ ಬೇಡವೇ ಎಂಬುದನ್ನು ನಿರ್ಧರಿಸಲಾಗುತ್ತದೆ.

ಈ ನಿಯಮಗಳ ಅನುಸಾರವಾಗಿ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದ ಹಿಂದೂ, ಸಿಖ್, ಜೈನ್, ಬೌದ್ಧ, ಪಾರ್ಸಿ ಮತ್ತು ಕ್ರಿಶ್ಚಿಯನ್ ಸಮುದಾಯದವರು ಮಾತ್ರ ಭಾರತದ ನಾಗರಿಕತ್ವಕ್ಕಾಗಿ ಅರ್ಜಿ ಸಲ್ಲಿಸಬೇಕು.

## ತೆಲಂಗಾಣಕ್ಕೆ ನೀರು: ಆಕ್ರೋಶ

**ರಾಯಚೂರು: ರಾಜ್ಯದ ಜನರಿಗೆ ಸಿಗಬೇಕಾದ ನೀರು ಅನಾಯಾಸವಾಗಿವಾಗಿ ತೆಲಂಗಾಣ ಪಾಲಾಗುತ್ತಿದೆ. ಆರ್‌ಟಿಪಿಎಸ್‌ಗೆ ನೀರು ಒದಗಿಸುವ ನೆಪದಲ್ಲಿ ನಾರಾಯಣಪುರ ಜಲಾಶಯದಿಂದ ಕೃಷ್ಣಾ ನದಿಗೆ ಬಿಡುಗಡೆ ಮಾಡಿರುವ ನೀರು ತೆಲಂಗಾಣಕ್ಕೆ ಹೋಗುತ್ತಿದೆ ಅಂತ ರಾಯಚೂರಿನ ರೈತರು ಆಕ್ರೋಶ ಹೊರಹಾಕಿದ್ದಾರೆ.**

ತೆಲಂಗಾಣದಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ರಾಜ್ಯ ಸರ್ಕಾರ ಕೃಷ್ಣಾ ನದಿಗೆ ನೀರು ಹರಿಸುತ್ತಿದೆ ಅಂತ ರೈತರು ಆರೋಪಿಸಿದ್ದಾರೆ. ಕುಡಿಯುವ ನೀರಿನ ಸಮಸ್ಯೆ, ರೈತರ ಬೆಳೆಗೆ ನೀರಿನ ಸಮಸ್ಯೆಯಿದ್ದಾಗ ನೀರು ಬಿಡದ ಸರ್ಕಾರ ಈಗ ಯಾಕೆ ನೀರು ಹರಿಸುತ್ತಿದೆ? ಅಂತ ಪ್ರಶ್ನಿಸಿದ್ದಾರೆ.

ಜಲಾಶಯದಲ್ಲಿ ನೀರಿನ ಕೊರತೆ ಹಿನ್ನೆಲೆ ರೈತರ ಬೆಸಿಗೆ ಬೆಳೆಗೆ ನೀರು ಹರಿಸದ ಸರ್ಕಾರ, ಈಗಲೂ ಕಾಲುವೆಗೆ ನೀರು ಹರಿಸದೇ 1.25 ಟಿಎಂಸಿ ಅಡಿ ನೀರು ಕೃಷ್ಣಾ ನದಿಗೆ ಬಿಟ್ಟಿದೆ. ಮೇ 7 ರಿಂದ ಜಲಾಶಯದಿಂದ ಕೃಷ್ಣಾ ನದಿಗೆ ನೀರು ಬಿಡುಗಡೆ ಮಾಡಲಾಗಿದೆ. 33.33 ಟಿಎಂಸಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 14 ಟಿಎಂಸಿ ನೀರು ಸಂಗ್ರಹವಿದೆ. ಆರ್‌ಟಿಪಿಎಸ್‌ಗಾಗಿ ರಾಯಚೂರಿನ ಗುರ್ಜಾಪುರ ಬಳಿ ನಿರ್ಮಿಸಿರುವ ಬ್ಯಾರೇಜ್ 0.46 ಟಿಎಂಸಿ ಸಾಮರ್ಥ್ಯ ಹೊಂದಿದೆ.

ಆದ್ರೆ ಹೆಚ್ಚಿನ ಪ್ರಮಾಣದ ನೀರು ಹರಿಸುತ್ತಿರುವುದರಿಂದ ಬ್ಯಾರೇಜ್ ಮೂಲಕ ತೆಲಂಗಾಣ ಭಾಗಕ್ಕೆ ನೀರು ಹರಿಯುತ್ತಿದೆ. ನೀರಿನ ವಿಚಾರದಲ್ಲಿ ಸರ್ಕಾರ ರಾಜಕೀಯ ಮಾಡಬಾರದು ಅಂತ ರೈತರು ಎಚ್ಚರಿಕೆ ನೀಡಿದ್ದಾರೆ.

ಅಂಜಲಿ ಅಂಬಿಗೇರ (21) ಕೊಲೆಯಾದ ಯುವತಿ. ಹುಬ್ಬಳ್ಳಿಯ ವೀರಾಪುರ ಓಣಿಯಲ್ಲಿ ಘಟನೆ ನಡೆದಿದ್ದು, ಮನೆಯಲ್ಲಿದ್ದ ಅಂಜಲಿಗೆ ಚಾಕು ಇರಿದು ಕೊಲೆ ಮಾಡಿ ಹಂತಕ ಎಸ್ಕೇಪ್ ಆಗಿದ್ದಾನೆ. ಗಿರೀಶ್ ಅಲಿಯಾಸ್ ವಿಶ್ವ ಈ ಕೃತ್ಯವೆಸಗಿದ್ದು, ಅಜ್ಜಿ ಮತ್ತು ಇಬ್ಬರು ಸಹೋದರಿಯರ ಮುಂದೆಯೇ ಅಂಜಲಿಯನ್ನು ಮನೆ ತುಂಬೆಲ್ಲಾ ಎಳೆದಾಡಿ ಚಾಕುವಿನಿಂದ ಚುಚ್ಚಿ ಭೀಕರ ಹತ್ಯೆಗೈದಿದ್ದಾನೆ. ಮೊದಲಿಗೆ ಮನೆಯ ಪಡಸಾಲಿಯಲ್ಲಿ ಅಂಜಲಿಗೆ ಚಾಕು ಹಾಕಿ, ಬಳಿಕ ಕುತ್ತಿಗೆ ಹಿಡಿದು ಗೋಡೆಯತ್ತ ಎಳೆದುಕೊಂಡು ಹೋಗಿ ಹೊಟ್ಟೆ ಭಾಗಕ್ಕೆ ಚಾಕು ಹಾಕಿದ್ದಾನೆ. ಅಷ್ಟಕ್ಕೇ ತೃಪ್ತಿಯಾಗದೇ ಅಲ್ಲಿಂದ ಅಡುಗೆಯ ಮನೆಗೆ ಎಳೆದೊಯ್ದು ಮನ ಬಂದಂತೆ ಚಾಕು ಚುಚ್ಚಿ ಅಂಜಲಿ ಕೊನೆಯುಸಿರೆಳೆದ ಬಳಿಕವೇ ಅಲ್ಲಿಂದ ಕಾಲ್ಕಿತ್ತಿದ್ದಾನೆ.

# ಹುಬ್ಬಳ್ಳಿಯಲ್ಲಿ ಮತ್ತೋರ್ವ ಯುವತಿಯ ಭೀಕರ ಹತ್ಯೆ

ಹುಬ್ಬಳ್ಳಿ: ಇಡೀ ದೇಶದಲ್ಲಿ ತೀವ್ರ ಸಂಚಲನ ಮೂಡಿಸಿದ್ದ ಹುಬ್ಬಳ್ಳಿ ಕಾಂಗ್ರೆಸ್ ಪಾಲಿಕೆ ಸದಸ್ಯ ನಿರಂಜನ್ ಅವರ ಪುತ್ರಿ ನೇಹಾ ಹತ್ಯೆ ಪ್ರಕರಣ ಮಾಸುವ ಮುನ್ನವೇ ಮತ್ತೊಂದು ಯುವತಿಯ ಬರ್ಬರ ಕೊಲೆಯಾಗಿದೆ. ಮನೆಯವರ ಮುಂದೆಯೇ ಯುವತಿಗೆ ಚಾಕು ಇರಿದು ಕೊಲೆ ಮಾಡಿದ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ.



ಅಂಜಲಿ ಅಂಬಿಗೇರ (21) ಕೊಲೆಯಾದ ಯುವತಿ. ಹುಬ್ಬಳ್ಳಿಯ ವೀರಾಪುರ ಓಣಿಯಲ್ಲಿ ಘಟನೆ ನಡೆದಿದ್ದು, ಮನೆಯಲ್ಲಿದ್ದ ಅಂಜಲಿಗೆ ಚಾಕು ಇರಿದು ಕೊಲೆ ಮಾಡಿ ಹಂತಕ ಎಸ್ಕೇಪ್ ಆಗಿದ್ದಾನೆ. ಗಿರೀಶ್ ಅಲಿಯಾಸ್ ವಿಶ್ವ ಈ ಕೃತ್ಯವೆಸಗಿದ್ದು, ಅಜ್ಜಿ ಮತ್ತು ಇಬ್ಬರು ಸಹೋದರಿಯರ ಮುಂದೆಯೇ ಅಂಜಲಿಯನ್ನು ಮನೆ ತುಂಬೆಲ್ಲಾ ಎಳೆದಾಡಿ ಚಾಕುವಿನಿಂದ ಚುಚ್ಚಿ ಭೀಕರ ಹತ್ಯೆಗೈದಿದ್ದಾನೆ. ಮೊದಲಿಗೆ ಮನೆಯ ಪಡಸಾಲಿಯಲ್ಲಿ ಅಂಜಲಿಗೆ ಚಾಕು ಹಾಕಿ, ಬಳಿಕ ಕುತ್ತಿಗೆ ಹಿಡಿದು ಗೋಡೆಯತ್ತ ಎಳೆದುಕೊಂಡು ಹೋಗಿ ಹೊಟ್ಟೆ ಭಾಗಕ್ಕೆ ಚಾಕು ಹಾಕಿದ್ದಾನೆ. ಅಷ್ಟಕ್ಕೇ ತೃಪ್ತಿಯಾಗದೇ ಅಲ್ಲಿಂದ ಅಡುಗೆಯ ಮನೆಗೆ ಎಳೆದೊಯ್ದು ಮನ ಬಂದಂತೆ ಚಾಕು ಚುಚ್ಚಿ ಅಂಜಲಿ ಕೊನೆಯುಸಿರೆಳೆದ ಬಳಿಕವೇ ಅಲ್ಲಿಂದ ಕಾಲ್ಕಿತ್ತಿದ್ದಾನೆ.  ಕಳೆದ ಮೂರು ತಿಂಗಳ ಹಿಂದೆ ಅಂಜಲಿ ಮನೆಯಿಂದ ಹೋಗಿದ್ದು, ಎಂಟು ದಿನಗಳ ಹಿಂದೆ ಮನೆಗೆ ಬಂದಿದ್ದಳು. ಕೊಲೆಯಾದ ಅಂಜಲಿ ಕ್ಯಾಟರಿಂಗ್ ಕೆಲಸ ಮಾಡುತ್ತಿದ್ದಳು ಎಂದು ತಿಳಿದುಬಂದಿದೆ. ಕೊಲೆ ಮಾಡಿದ ವಿಶ್ವ ಮತ್ತು ಅಂಜಲಿ ಸಹಪಾಠಿಗಳಾಗಿದ್ದು, ಉತ್ತಮ ಒಡನಾಟ ಹೊಂದಿದ್ದರು. ತನ್ನ ಜೊತೆ ಸಲುಗೆಯಿಂದ ಇದ್ದ ಅಂಜಲಿಯನ್ನು ವಿಶ್ವ ತಪ್ಪಾಗಿ ಅರ್ಥೈಸಿಕೊಂಡಿದ್ದ. ನನ್ನ ಜೊತೆ ಸುತ್ತಾಡಲು ಬಾ ಎಂದು ಪೀಡಿಸುತ್ತಿದ್ದ. ಇದಕ್ಕೆ ಅಂಜಲಿ ನಿರಾಕರಿಸಿದ್ದಳು. ಕೋಪಗೊಂಡ ಗಿರೀಶ್ ಅಲಿಯಾಸ್ ವಿಶ್ವ ಇಂದು ಬೆಳಗ್ಗಿನ ಜಾವ ಅಂಜಲಿ ಮನೆಗೆ ನುಗ್ಗಿ ಕೊಲೆ ಮಾಡಿ ಪರಾರಿಯಾಗಿದ್ದಾನೆ.  ಆರೋಪಿ ವಿಶ್ವ ಒಂದು ವಾರದ ಹಿಂದೆಯೇ ಅಂಜಲಿಗೆ ಜೀವ ಬೆದರಿಕೆ ಹಾಕಿದ್ದು, ನನ್ನ ಜೊತೆಗೆ ಬಾರದಿದ್ದರೆ ನೇಹಾ ರೀತಿ ಕೊಲೆ ಮಾಡುವೆ ಎಂದು ವಾರ್ನಿಂಗ್ ಮಾಡಿದ್ದ. ಕೂಡಲೇ ಅಂಜಲಿ ಕುಟುಂಬಸ್ಥರು ಬೆಂಡಿಗೇರಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಆದರೆ ಪೊಲೀಸರು ಅಂಜಲಿ ಕುಟುಂಬಸ್ಥರಿಗೆ ಬೈದು ನಿಮ್ಮದು ಮೂಢನಂಬಿಕೆ ಹಾಗೇನು ಆಗಲ್ಲ ಎಂದು ನಿರ್ಲಕ್ಷ್ಯ ತೋರಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಬೆಂಡಿಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸ್ಥಳಕ್ಕೆ ಬೆಂಡಿಗೇರಿ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸುತ್ತಿದ್ದಾರೆ.

## 'ಗೋಧ್ರಾ ಗಲಭೆ ನಂತರ ಮುಸ್ಲಿಮರಲ್ಲಿ ನನ್ನ ವ್ಯಕ್ತಿತ್ವಕ್ಕೆ ಕಳಂಕ ತಂದಿದ್ದಾರೆ'

ನವದೆಹಲಿ: 2002ರ ಗೋಧ್ರಾ ಗಲಭೆ ನಂತರ ವಿರೋಧಿಗಳು ಮುಸ್ಲಿಮರಲ್ಲಿ ನನ್ನ ವ್ಯಕ್ತಿತ್ವಕ್ಕೆ ಕಳಂಕ ತಂದಿದ್ದಾರೆ ಎಂದು ಪ್ರಧಾನಿ ಮೋದಿ ಅಸಮಾಧಾನ ಹೊರಹಾಕಿದ್ದಾರೆ.

ಖಾಸಗಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಅವರು, 2002ರಲ್ಲಿ ಗೋಧ್ರಾ ಹತ್ಯಾಕಾಂಡದ ಬಳಿಕ, ವಿರೋಧಿಗಳು ಮುಸ್ಲಿಮರಲ್ಲಿ ನನ್ನ ವ್ಯಕ್ತಿತ್ವಕ್ಕೆ ಕಳಂಕ ತಂದಿದ್ದಾರೆ ಎಂದು ಕಿಡಿ ಕಾರಿದ್ದಾರೆ.



ಮುಸ್ಲಿಮರು ನಮಗೆ ಎಷ್ಟು ಬೆಂಬಲ ಕೊಡುತ್ತಾರೆ ಎಂಬುದನ್ನು ಲೆಕ್ಕಿಸದೇ ಅವರ ಪರ ಕೆಲ ಮಾಡುತ್ತಿದ್ದೇನೆ. ನಮ್ಮ ಮನೆಯ ಸುತ್ತ ಎಲ್ಲಾ ಮುಸ್ಲಿಂ ಕುಟುಂಬಗಳೇ ಇವೆ. ನಮ್ಮ ಮನೆಯಲ್ಲಿ ಈದ್ ಜೊತೆಗೆ ಬೇರೆ ಬೇರೆ ಹಬ್ಬಗಳ ಆಚರಿಸುತ್ತಿದ್ದೆವು. ಈದ್ ಆಚರಿಸುವಾಗ ನಮ್ಮ ಮನೆಯಲ್ಲಿ ಅಡುಗೆಯೇ ಮಾಡುತ್ತಿರಲಿಲ್ಲ. ಸುತ್ತಮುತ್ತಲಿನ ಮುಸ್ಲಿಂ ಕುಟುಂಬಗಳಿಂದಲೇ ಊಟ ಬರುತ್ತಿತ್ತು. ಆ ಪ್ರಪಂಚದಲ್ಲೂ ನಾನು ಬೆಳೆದಿದ್ದೇನೆ. ಇಂದಿಗೂ ಮೊಹರಂ ಸಂದರ್ಭದಲ್ಲಿ ಕೆಲ ಮುಸ್ಲಿಂ ಸ್ನೇಹಿತರು ಮನೆಗೆ ಊಟ ತಂದುಕೊಡುತ್ತಾರೆ. ಆದ್ರೆ 2002ರಲ್ಲಿ ನಡೆದ ಗೋಧ್ರಾ ಹತ್ಯಾಕಾಂಡದ ಬಳಿಕ ಮುಸ್ಲಿಮರಲ್ಲಿ ನನ್ನ ವ್ಯಕ್ತಿತ್ವಕ್ಕೆ ಕಳಂಕ ತರಲಾಗಿದೆ ಎಂದು ಬೇಸರ ಹೊರಹಾಕಿದ್ದಾರೆ.

ಮುಂದುವರಿದು ಮಾತನಾಡಿದ ಅವರು, ನಾನು ಯಾವತ್ತಿಗೂ ಹಿಂದೂ-ಮುಸ್ಲಿಮರು ಅಂತ ಪ್ರತ್ಯೇಕಿಸುವುದಿಲ್ಲ. ನಾನು ಹಿಂದೂ-ಮುಸ್ಲಿಮರನ್ನು ಪ್ರತ್ಯೇಕಿಸುವ ದಿನ ಸಾರ್ವಜನಿಕ ಜೀವನದಲ್ಲಿ ಇರಲು ಅರ್ಹನಾಗುವುದಿಲ್ಲ. ಎಂದಿಗೂ ನಾನು ಹಿಂದೂ-ಮುಸ್ಲಿಂ ಅಂತ ಪ್ರತ್ಯೇಕಿಸಲ್ಲ, ಇದು ನನ್ನ ಪ್ರತಿಜ್ಞೆ ಎಂದು ಮೋದಿ ನುಡಿದಿದ್ದಾರೆ.

ಇದೇ ವೇಳೆ ಕೆಲ ದಿನಗಳ ಹಿಂದೆ ರಾಜಸ್ಥಾನದ ಬನ್ಸ್ವಾರಾದಲ್ಲಿ ಚುನಾವಣಾ ಸಮಾವೇಶವನ್ನುದ್ದೇಶಿಸಿ ಮಾತನಾಡುವ ವೇಳೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದ ಸಂಪತ್ತನ್ನು ಒಳನುಗ್ಗುವವರು ಮತ್ತು ಹೆಚ್ಚು ಮಕ್ಕಳನ್ನು ಹೊಂದಿರುವವರಿಗೆ ಹಂಚಬಹುದು ಎಂದಿದ್ದ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ್ದಾರೆ. ನಾನು ಇದನ್ನು ಮುಸ್ಲಿಮರಿಗೆ ಹೇಳಿದ್ದಲ್ಲ.

# ಕನ್ನಡದಲ್ಲಿ ಬರುತ್ತಿದೆ 'ಶ್ರೀಮದ್ ರಾಮಾಯಣ'

ಬೆಂಗಳೂರು: ಕಳೆದ ಮೂರೂವರೆ ದಶಕಗಳಿಂದ ತನ್ನದೆ ಸಾಮರ್ಥ್ಯವನ್ನು ಉಳಿಸಿಕೊಂಡು ಬರುತ್ತಿರುವ ಉದಯ ವಾಹಿನಿಯು ಈಗ 'ಶ್ರೀಮದ್ ರಾಮಾ ಯಣ' ಧಾರವಾಹಿಯನ್ನು ವೀಕ್ಷಕರಿಗೆ ಉಣಬಡಿಸಲು ಸಿದ್ದತೆ ಮಾಡಿಕೊಂಡಿದೆ. ಅದ್ಭುತ ಕಾವ್ಯವನ್ನು ಹೊಸ ತಲೆಮಾರಿಗೆ ತಲುಪಿಸಲು ಮುಂದಾಗಿದೆ.

ರಾಮಾಯಣ ಭಾರತೀಯ ಸಂಸ್ಕೃತಿ, ಪರಂಪರೆ ಪ್ರತಿಬಿಂಬಿಸಲಿರುವುದು ವಿಶೇಷ. ರಾಮನ ಜೀವನ ಬಹುತೇಕ ಭಾರತೀಯರಿಗೆ ಮಾದರಿಯಾಗಿದೆ. ಆತನ ರಾಜ್ಯ ಪರಿಪಾಲನೆಯು ಇಂದಿಗೂ ರಾಮರಾಜ್ಯ



ಆತನ ರಾಜ್ಯ ಪರಿಪಾಲನೆಯು ಇಂದಿಗೂ ರಾಮರಾಜ್ಯ ಅನ್ನುವ ಪದ ಈಗಲೂ ಬಳಸಲಾಗುತ್ತಿದೆ. ರಾಮ ಮತ್ತು ಸೀತೆಯ ಪವಿತ್ರ ಪ್ರೇಮ, ಕಥೆಯಲ್ಲಿ ಧರ್ಮದ ಪಾಲನೆಯ ಮಾರ್ಗದಲ್ಲಿ ಎದುರಿಸಿದ ಅನೇಕ ಸವಾಲುಗಳು ಕುತೂಹಲಕಾರಿಯಾಗಿದೆ. ಸಂಪೂರ್ಣ ನೂತನ ದೃಶ್ಯ ವೈಭವಗಳು, ವೈವಿಧ್ಯಮಯ ನಟರ ತಂಡವು ಪೌರಾಣಿಕ ಪಾತ್ರಗಳಿಗೆ ಹೊಸ ಜೀವ ತುಂಬಲಿದೆ. ಪ್ರತಿ ಸಂಚಿಕೆಯ 250 ವೀಕ್ಷಕರಿಗೆ ಒಟ್ಟು 2.5 ಲಕ್ಷ ರೂಪಾಯಿ ನಗದು ಬಹುಮಾನ ಗೆಲ್ಲುವ ಅವಕಾಶವನ್ನು ಕಲ್ಪಿಸಿದೆ.

ಅನ್ನುವ ಪದ ಈಗಲೂ ಬಳಸಲಾಗುತ್ತಿದೆ. ರಾಮ ಮತ್ತು ಸೀತೆಯ ಪವಿತ್ರ ಪ್ರೇಮ, ಕಥೆಯಲ್ಲಿ ಧರ್ಮದ ಪಾಲನೆಯ ಮಾರ್ಗದಲ್ಲಿ ಎದುರಿಸಿದ ಅನೇಕ ಸವಾಲುಗಳು ಕುತೂಹಲಕಾರಿಯಾಗಿದೆ. ಸಂಪೂರ್ಣ ನೂತನ ದೃಶ್ಯ ವೈಭವಗಳು, ವೈವಿಧ್ಯಮಯ ನಟರ ತಂಡವು ಪೌರಾಣಿಕ ಪಾತ್ರಗಳಿಗೆ ಹೊಸ ಜೀವ ತುಂಬಲಿದೆ.

ಪ್ರತಿ ಸಂಚಿಕೆಯ 250 ವೀಕ್ಷಕರಿಗೆ ಒಟ್ಟು 2.5 ಲಕ್ಷ ರೂಪಾಯಿ ನಗದು ಬಹುಮಾನ ಗೆಲ್ಲುವ ಅವಕಾಶವನ್ನು ಕಲ್ಪಿಸಿದೆ.

ಸೀರಿಯಲ್ ವೀಕ್ಷಿಸಿ ಕೊನೆಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಮಿಸ್ಡ್ ಕಾಲ್ ಮೂಲಕ ಸರಿ ಉತ್ತರ ನೀಡಿದವರಿಗೆ ತಲಾ ಒಂದು ಸಾವಿರ ಬಹುಮಾನವನ್ನು ಅಂದೇ ಸಂದಾಯವಾಗುವಂತೆ ಯೋಜನೆ ರೂಪಿಸಲಾಗಿದೆ. ಸೀರಿಯಲ್ ಸೋಮವಾರದಿಂದ ಶನಿವಾರದವರೆಗೆ ಮೇ 20ರಿಂದ ಸಂಜೆ 6 ಗಂಟೆಗೆ ಉದಯ ಟಿವಿದಲ್ಲಿ ಪ್ರಸಾರವಾಗಲಿದೆ.


ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುವುದು ಈಗ ಮತ್ತಷ್ಟು ಸುಲಭ

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjaneevartheepaper.com

# ದುಮ್ಮಳ್ಳಿಯಲ್ಲಿ ಮರ್ಡರ್ ಯಾಕಾಗಿ ಗೊತ್ತಾ?

ಶಿವಮೊಗ್ಗ: ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಶಿವಮೊಗ್ಗದ ಹೊರವಲಯದ ದುಮ್ಮಳ್ಳಿಯಲ್ಲೊಂದು ಕೊಲೆಯಾಗಿದೆ. ಹತ್ಯೆಯಾದವನ ಮೃತ ದೇಹ ತೋಟದಲ್ಲಿ ಪತ್ತೆಯಾಗಿದ್ದು ಸತೀಶ್ (28) ಎಂದು ಗುರುತಿಸಲಾಗಿದೆ.

ದುಮ್ಮಳ್ಳಿಯಲ್ಲಿ ಜಮೀನು ಹೊಂದಿದ್ದ ಸತೀಶ್‌ಗೆ ಜಮೀನಿನ ವಿಚಾರದಲ್ಲಿ ಅಕ್ಕಪಕ್ಕದ ಗಲಾಟೆ ಇತ್ತು ಎನ್ನಲಾಗಿದೆ. ಇಂದು ಬೆಳಿಗ್ಗೆ ಸತೀಶ್ ನನ್ನ ಕರೆದುಕೊಂಡು ಹೋಗಿ ಕೊಲೆ ಮಾಡಲಾಗಿದೆ. ಕೊಲೆ ಮಾಡಿದವನ್ನನ ಅಖಿಲೇಶ್ ಎಂದು ಗುರುತಿಸಲಾಗಿದೆ.

ಮೃತ ಸತೀಶ್‌ನ ತಂದೆ ಶೇಷಾ ನಾಯ್ಕ್ ಮಾಧ್ಯಮಗಳಿಗೆ ಮಾತನಾಡಿ, ನ್ಯಾಯಾಲಯದಲ್ಲಿ ನಮಗೂ ಮತ್ತು ಪಕ್ಕದ ಜಮೀನಿನ ಮಂಜಾನಾಯ್ಕ್ ಜೊತೆ ವ್ಯಾಜ್ಯವಿತ್ತು. ವ್ಯಾಜ್ಯ ತೀರ್ಮಾನವಾಗಿ ನಮ್ಮ ಪರವಾಗಿದೆ. ಇಂದು ಬೆಳಿಗ್ಗೆ ಮಗ ಸತೀಶ್ ನಾಯ್ಕ್ ಜಮೀನಿಗೆ ಬಂದಾಗ ಮಂಜಾನಾಯ್ಕನ ಮಗ ಅಖಿಲೇಶ್ ಕಂದ್ಲಿಯಲ್ಲಿ ದಾಳಿ ನಡೆಸಿ ಕೊಲೆ ಮಾಡಿದ್ದಾನೆ ಎಂದು ದೂರಿದ್ದಾರೆ.

ಸತೀಶ್ ಸ್ಥಳದಲ್ಲಿ ಸಾವು ಕಂಡಿದ್ದು, ಆರೋಪಿ ಅಖಿಲೇಶ್ ನನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಯ ತಾಯಿಯೂ ಈ ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ಮೃತನ ತಂದೆ ಆರೋಪಿಸಿದ್ದಾರೆ.

ದುಮ್ಮಳ್ಳಿಯಲ್ಲಿ ಆರೋಪಿಗಳ ಮನೆಯ ಮೇಲೆ ಉದ್ರಿಕ್ತ ಗ್ರಾಮಸ್ಥರು ಕಲ್ಲು ತೂರಿದ್ದು ಕಲ್ಲು ತೂರಾಟದಲ್ಲಿ ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿಗೆ ಗಾಯವಾಗಿದೆ.

ಮನೆಯಲ್ಲಿದ್ದ ಆರೋಪಿಯ ಕುಟುಂಬಸ್ಥರನ್ನು ಪೊಲೀಸರ ರಕ್ಷಣೆಯಲ್ಲಿ ಕರೆದೊಯ್ಯಲಾಗಿದೆ. ಪೊಲೀಸರು ಒಂದು ವೇಳೆ ಸ್ಥಳದಲ್ಲಿ ಇರಲಿಲ್ಲವೆಂದರೆ ಆರೋಪಿಯ ಕುಟುಂಬಸ್ಥರ ಸ್ಥಿತಿ ಗಂಭೀರವಾಗುತ್ತಿತ್ತು. ಬೀಸಿದ ಕಲ್ಲೊಂದು ಮಿಸ್ ಆಗಿ ಸಿಬ್ಬಂದಿಗೆ ತಗುಲಿ ಗಾಯವಾಗಿದೆ.

ಆರೋಪಿಗಳ ತಾಯಿ ಹೆಂಡತಿ ಮತ್ತು ಮಗಳನ್ನ ಪೊಲೀಸ್ ರಕ್ಷಣೆಯಲ್ಲಿ ಕರೆದೊಯ್ಯಲಾಗಿದೆ. ರಕ್ಷಣೆಯಲ್ಲಿ ಕರೆದೊಯ್ಯುವವರೆಗೆ ಆರೋಪಿಗಳಿಗೆ ಮಹಿಳ ಪೊಲೀಸರ ಭದ್ರತೆ ಒದಗಿಸಲಾಗಿತ್ತು. ಮನೆಯ ಒಳಗೆಲ್ಲ ಕಲ್ಲಿನ ಚೂರುಗಳು ಪತ್ತೆಯಾಗಿದೆ. ತುಂಗಾ ನಗರ ಪೊಲೀಸರು ಸ್ಥಳದಲ್ಲಿ ಬಿಗಿ ಭದ್ರತೆ ಒದಗಿಸಿದ್ದಾರೆ.

# ಡಾ. ಹಿರೇಮಠರಿಗೆ ಚಿಕಿತ್ಸಾ ವೈಶಿಷ್ಟ್ಯ ಪ್ರಶಸ್ತಿ



ಧಾರವಾಡ : ನಗರದ ಪ್ರಸಿದ್ಧ ಆಯುರ್ವೇದ ತಜ್ಞ, ಪ್ರಾಧ್ಯಾಪಕ ಹುದ್ದೆಗೆ ಡಾ. ಮಹಾಂತಸ್ವಾಮಿ ಹಿರೇಮಠ ಅವರಿಗೆ ಬೆಳಗಾವಿ ಕೆ.ಎಲ್.ಈ. ವಿಶ್ವವಿದ್ಯಾಲಯ, ಬಿ ಎಂ ಕಂಕಣವಾಡಿ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ ಕೊಡಮಾಡುವ 'ಚಿಕಿತ್ಸಾ ವೈಶಿಷ್ಟ್ಯ ಪ್ರಶಸ್ತಿ' ಲಭಿಸಿದೆ.

ಬೆಳಗಾವಿಯಲ್ಲಿ ಜರುಗಿದ ವಿಶೇಷ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಳೆದ 26 ವರ್ಷಗಳಿಂದ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಆಯುರ್ವೇದ ಶಾಸ್ತ್ರ ನಿರ್ದೇಶನದ ಆಯುರ್ವೇದ ಚಿಕಿತ್ಸೆಯ ಮೂಲಕ ಮನೆಮಾತಾಗಿದ್ದಾರೆ. ಶಾಲಾ ಕಾಲೇಜುಗಳಲ್ಲಿ, ಶಹರ, ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗಾಗಿ, ಪೌರಕಾರ್ಮಿಕರಿಗೆ, ಕಾರರ್ಖಾನೆಗಳಲ್ಲಿ, ಜಾತ್ರೆ, ಉತ್ಸವಗಳಲ್ಲಿ ಉಚಿತ ಆರೋಗ್ಯ ತಪಾಸಣೆ ನಡೆಸುತ್ತಾ, ತಂಬಾಕು, ಗುಟ್ಕಾ, ಸರಾಯಿ ಸೇವನೆಯಿಂದಾಗಿ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ತಿಳುವಳಿಕೆಯ ವಿವಿಧ ಜನಜಾಗೃತಿ ಕಾರ್ಯಕ್ರಮಗಳ ಮೂಲಕ ಜನತೆಯನ್ನು ದುಶ್ಚಟದಿಂದ ಮುಕ್ತಮಾಡುವ ಅವರ ಜನಕಲ್ಯಾಣದ ಆಶಯ ಪರಿಗಣಿತವಾಗಿದೆ. ಜೊತೆಗೆ ಡಾ.ಮಹಾಂತಸ್ವಾಮಿ ಅವರು ನಗರದ ತಮ್ಮ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಬೇರೆ ಬೇರೆ ರೋಗಗಳ ಬಗ್ಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಚಿಕಿತ್ಸೆ ನೀಡುವ ಜನಪರ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

ಕೆ.ಎಲ್. ಇ. ವಿವಿ ಕುಲಪತಿ ಡಾ. ನತಿನ್ ಗಂಗನೆ, ಪ್ರಾಚಾರ್ಯ ಡಾ ಸುಹಾಸಕುಮಾರ ಶೆಟ್ಟಿ , ಡಾ ಜೇಡರ, ಡಾ. ಗಜೇಂದ್ರ, ಡಾ.ರಾಜೇಂದ್ರಸ್ವಾಮಿ, ಡಾ. ಗುಂಡಕಲೆ, ಮುಂಬೈದ ರೈಲ್ವೆ ಕಮಿಷನರ್ ಡಾ. ರವೀಂದ್ರ ಶಿಶ್ವೆ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿಗಳೂ ಸೇರಿದಂತೆ ಇತರರು ಇದ್ದರು.

# 21ರಂದು ಕಾರಿಡಾರ್ ರಸ್ತೆಯಲ್ಲಿ ಧರಣಿ

ಮುಳಬಾಗಲು: ಕಂದಾಯ ಸರ್ವೇ ಅಧಿಕಾರಿಗಳ ರೈತ ವಿರೋಧಿ ಧೋರಣೆಯನ್ನು ಖಂಡಿಸಿ ಚೆನ್ನೈ ಕಾರಿಡಾರ್ ರಸ್ತೆ ಅಭಿವೃದ್ಧಿಗೆ ಭೂಮಿ ಕಳೆದುಕೊಂಡಿರುವ ರೈತರ ಮರಗಿಡಗಳ ಎರಡನೇ ಪರಿಹಾರಕ್ಕಾಗಿ ಮೇ 21ರ ಮಂಗಳವಾರ ಬಾಬಾ ಸಾಹೇಬ್ ಅಂಬೇಡ್ಕರ್ ಫೋಟೋ ಹಾಗೂ ಜಾನುವಾರುಗಳು, ಕುಟುಂಬ ಸಮೇತ ಕಾರಿಡಾರ್ ರಸ್ತೆಯಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳುವ ನಿರ್ಧಾರವನ್ನು ನೊಂದ ರೈತರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಗಡಿಭಾಗದ ಏತರನಹಳ್ಳಿ ಪರಿಹಾರ ವಂಚಿತ ನೊಂದ ರೈತ ಮಾರಪ್ಪ, ನಾರಾಯಣಸ್ವಾಮಿಯವರ ತೋಟದಲ್ಲಿ ಸೇರಿದ್ದ ಸಭೆಯಲ್ಲಿ ಮಾತನಾಡಿದ ಅವರು, ಚೆನ್ನೈ ಕಾರಿಡಾರ್ ರಸ್ತೆ ಅಭಿವೃದ್ಧಿಗೆ ಭೂಮಿ ಕಳೆದುಕೊಂಡು 10 ವರ್ಷ ಕಳೆದರೂ ಪರಿಹಾರಕ್ಕಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿಗೆ ಹೋದರೆ ದಾಖಲೆಗಳಿಲ್ಲ. ತಾಲೂಕು ದಂಡಾಧಿಕಾರಿಗಳಿಂದ ದಾಖಲೆ ಇಲ್ಲವೇ ವರದಿ ತಂದುಕೊಡಿ ಎಂದು ರೈತರನ್ನು ಅಲೆದಾಡಿಸುತ್ತಿದ್ದಾರೆ.

ಇನ್ನು ತಾಲೂಕು ಕಚೇರಿಗೆ ಬಂದು ದಾಖಲೆ ಕೇಳಿದರೆ ಕನಿಷ್ಠ ಸೌಜನ್ಯಕ್ಕಾದರೂ ಕಷ್ಟವನ್ನು ಕೇಳುವವರಿಲ್ಲ. ತಾಯಲೂರು ಕಂದಾಯ ಅಧಿಕಾರಿಗಳು ತಾಲೂಕು ಕಚೇರಿಯನ್ನು ಅಂಗೈಯಲ್ಲಿಟ್ಟುಕೊಂಡು ಅಧಿಪತ್ಯ ನಡೆಸುತ್ತಿರುವ ಶ್ರೀನಿವಾಸ್ ಅವರ ಮೇಲೆ ಹೇಳುತ್ತಾರೆ.

ಅವರನ್ನು ಕೇಳಿದರೆ ರಾತ್ರಿ ಕಾಣುವ ನಕ್ಷತ್ರಗಳನ್ನು ಹಗಲು ವೇಳೆ ರೈತರಿಗೆ ತೋರಿಸಿ ರೈತ ವಿರೋಧಿ ಧೋರಣೆಯನ್ನು ಅನುಸರಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.



**ಅಧಿಕಾರಿಗಳಿಗೆ ರೈತರ ಮೇಲೆ ಕರುಣೆಯಿಲ್ಲ, ಪರಿಹಾರವೂ ಸಿಗುತ್ತಿಲ್ಲ**

2016ರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಹಾರಕ್ಕಾಗಿ ಕೈ ಮುಗಿದೆವು, ಕಾಲು ಹಿಡಿದುಕೊಂಡೆವು, ಕಡೇ ಪಕ್ಷ ನಮ್ಮ ಕಣ್ಣೀರನ್ನು ಸುರಿಸಿದರೂ ಅಧಿಕಾರಿಗಳಿಗೆ ರೈತರ ಮೇಲೆ ಕರುಣೆ ಬರುತ್ತಿಲ್ಲ. ದಾಖಲೆಗಳೂ ಕೊಡುತ್ತಿಲ್ಲ. ಪರಿಹಾರವೂ ಸಿಗುತ್ತಿಲ್ಲ. ಅದನ್ನೇ ನಂಬಿದ್ದ ಕುಟುಂಬಗಳು ಬೀದಿಗೆ ಬೀಳುವ ಜೊತೆಗೆ ಕಡೆಯ ಪಕ್ಷ ನಮ್ಮ ಮೈಯಲ್ಲಿರುವ ರಕ್ತದ ಜೊತೆಗೆ ಅಂಗಾಂಗಗಳನ್ನು ಲಂಚದ ರೂಪದಲ್ಲಿ ದಾನ ಮಾಡುವ ಮುಖಾಂತರ 4 ದಿನ ಕಾಲಾವಕಾಶಕೊಟ್ಟು ತಾಲೂಕು ಆಡಳಿತ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳನ್ನು ಕೇಳಿಕೊಳ್ಳುತ್ತೇವೆಂದು ಸಭೆಯಲ್ಲಿ ಕಣ್ಣೀರು ಹಾಕಿದರು.

ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಮಾತನಾಡಿ, ಗಡಿಭಾಗದ ಏತರನಹಳ್ಳಿ ಸರ್ವೇ ನಂ.34, ಚುಕ್ಕನಹಳ್ಳಿ ಸರ್ವೇ ನಂ.35ರಲ್ಲಿ 15 ಜನ ರೈತರ ಕೃಷಿ ಜಮೀನು ಕಾರಿಡಾರ್ ರಸ್ತೆಗೆ ಭೂಸ್ವಾಧೀನವಾಗಿದೆ. ಅದರಲ್ಲಿ ಮೊದಲೇ ಮರಗಿಡಗಳ ಪರಿಹಾರ ವಿತರಣೆ ಮಾಡಿ 2ನೇ ಕಂತಿನ ಹಣವನ್ನು ಬಿಡುಗಡೆ ಮಾಡಲು ಚಿತ್ತೂರು ಪಿ.ಡಿ. ಮೇಲೆ ಕೋಲಾರ ವಿಶೇಷ ಭೂಸ್ವಾಧೀನಾಧಿಕಾರಿಗಳು ಇವರ ಮೇಲೆ ಅವರು ಆರೋಪ ಮಾಡಿಕೊಂಡು ಹಣ ಬಿಡುಗಡೆ ಮಾಡದೆ ರೈತರ ಜೊತೆ ಚೆಲ್ಲಾಟವಾಡುವ ಜೊತೆಗೆ ಖಾತೆಯಲ್ಲಿರುವ ಹಣ ಬಿಡುಗಡೆ ಮಾಡದೆ ರೈತ ವಿರೋಧ ಧೋರಣೆ ಅನುಸರಿಸುತ್ತಿದ್ದಾರೆಂದು ಅಸಮಾಧಾನ ವ್ಯಕ್ತಪಡಿಸಿದರು.

ಭೂ ಸ್ವಾಧೀನ ಮಾಡಿಕೊಳ್ಳುವಾಗ ಅನಕ್ಷರಸ್ಥ ಅಧಿಕಾರಿಗಳೇ ಸ್ಥಳ ಪರಿಶೀಲನೆ ಮಾಡಿ ಎಲ್ಲಾ ರೈತರ ದಾಖಲೆಗಳನ್ನು ತೆಗೆದುಕೊಂಡು ಆನಂತರ ಪರಿಹಾರದ ಹಣ ಯಾರ ಖಾತೆಗೆ ಹೋಗಬೇಕೆಂದು ವರದಿ ಸಿದ್ಧಪಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಿದ್ದಾರೆ. ಆದರೆ, ಈಗ ದಾಖಲೆ ಸರಿಯಿಲ್ಲ.

ಸರ್ವೇ ಸ್ಕೆಚ್ ಇಲ್ಲ. ಕಂದಾಯ ಅಧಿಕಾರಿಗಳ ವರದಿ ಬೇಕು ಎಂದು ರೈತರಿಗೆ ನೂರೊಂದು ಕಾನೂನು ನೆಪದಲ್ಲಿ ಪರಿಹಾರವನ್ನು ನೀಡದೆ ವಂಚನೆ ಮಾಡುತ್ತಿರುವ ಪ್ರಕರಣವನ್ನು ಜಿಲ್ಲಾಡಳಿತ ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಸೋಮವಾರದ ಒಳಗೆ ಗಡಿಭಾಗದ ರೈತರ ಪರಿಹಾರವನ್ನು ವಿತರಣೆ ಮಾಡದೇ ಇದ್ದರೆ ಮೇ.21ರ ಮಂಗಳವಾರ ಬೆಳಗ್ಗೆ 10 ಗಂಟೆಯಿಂದ ನ್ಯಾಯ ಸಿಗುವವರೆಗೂ ಬಾಬಾ ಸಾಹೇಬ್ ಅಂಬೇಡ್ಕರ್ ಫೋಟೋ, ಜಾನುವಾರುಗಳು, ಕುಟುಂಬ ಸಮೇತ ಹೋರಾಟದ ಸ್ಥಳಕ್ಕೆ ಚಿತ್ತೂರು ಪಿ.ಡಿ. ಕೋಲಾರ ಎಸ್.ಎಲ್.ಓ. ಕಂದಾಯ, ಸರ್ವೇ ಅಧಿಕಾರಿಗಳು ಬಂದು ಸಮಸ್ಯೆ ಸ್ಥಳದಲ್ಲಿ ಬಗೆಹರಿಸುವವರೆಗೂ ಹೋರಾಟವನ್ನು ಹಿಂಪಡೆಯದಂತೆ ಸಭೆಯಲ್ಲಿ ಒಗ್ಗಟ್ಟಿನಿಂದ ತೀರ್ಮಾನಿಸಲಾಯಿತು.

ಸಭೆಯಲ್ಲಿ ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ್, ರಾಜ್ಯ ಮುಖಂಡ ಮರಗಲ್ ಶ್ರೀನಿವಾಸ್, ಯಲುವಳ್ಳಿ ಪ್ರಭಾಕರ್, ಫಾರೂಖ್ ಪಾಷ, ರಾಜೇಶ್, ವಿಜಯ್‌ಪಾಲ್, ವೆಂಕಟೇಶ್, ಮಾರಪ್ಪ, ಮಂಗಮ್ಮ, ಬಾಬು, ಆನಂದರೆಡ್ಡಿ, ಸುಪ್ರೀಂ ಚಲ, ವಿನು ಮುಂತಾದವರಿದ್ದರು.

# ಹುಣಸೂರು ಎರಡನೇ ಭಟ್ಕಳವಾಗುತ್ತಿದೆ: ಮುತಾಲಿಕ್

ಹುಣಸೂರು: ಜಿಹಾದಿ ಸಂಸ್ಕೃತಿ ಇರುವ ಕಡೆಗಳಲ್ಲಿ ಹಿಂದೂ ಯುವಕರ ಕೊಲೆ. ಆತ್ಮಹತ್ಯೆಗೆ ಪ್ರಚೋದನೆ ನಡೆಯುತ್ತಲೇ ಇರುತ್ತದೆ. ಈ ಬಗ್ಗೆ ಸರಕಾರ ಮತ್ತು ಪೊಲೀಸ್ ಇಲಾಖೆ ಮುನ್ನೆಚ್ಚರಿಕೆ ವಹಿಸಬೇಕೆಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಎಚ್ಚರಿಸಿದರು. ವಿರಾಜಪೇಟೆಯಿಂದ ಮೈಸೂರಿಗೆ ತೆರಳುವ ಮಾರ್ಗ ಮಧ್ಯೆ ತಾಲೂಕಿನ ದಾಸನಪುರದ ರವಿ ಪುತ್ರ ಮುತ್ತುರಾಜ್ ಕೊಲೆಯಾಗಿದ್ದ ಹಿನ್ನೆಲೆಯಲ್ಲಿ ಅವರ ಮನೆಗೆ ಭೇಟಿ ನೀಡಿ ಕುಟಂಬದವರಿಂದ ಮಾಹಿತಿ ಪಡೆದು ಧೈರ್ಯ ಹೇಳಿದ ನಂತರ ಅವರು ಪ್ರಕರಣ ಕುರಿತು ಸ್ಥಳೀಯರಿಂದ ಮಾಹಿತಿ ಪಡೆದರು.

ನಂತರ ಮಾತನಾಡಿದ ಇದೊಂದು ಜಿಹಾದಿ ಮನಸ್ಥಿತಿಯುಳ್ಳವರಿಂದ ನಡೆದ ಕೃತ್ಯ. ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಇದಕ್ಕಾಗಿ ಹಿಂದೂ ಸಂಘಟನೆಗಳು ಬೆಂಬಲವಾಗಿ ನಿಲ್ಲಲಿವೆ. ಯಾವುದೇ ಕಾನೂನು ಹೋರಾಟಕ್ಕೂ ನೆರವು ನೀಡಲಾಗುವುದೆಂದು ಭರವಸೆ ಇತ್ತರು. ನಂತರ ನಗರದಲ್ಲಿ ಕೆಲ ಮುಖಂಡರನ್ನು ಭೇಟಿ ಮಾಡಿ ಚರ್ಚಿಸಿದರು.

ಹುಣಸೂರಿನ ಮುತ್ತುರಾಜ್, ಕೆ.ಆರ್.ನಗರದ ಪುನಿತ್ ಸಾವು ಕೂಡ ಒಂದೇ ರೀತಿಯಲ್ಲಿ ನಡೆದಿದೆ.



ಎರಡೂ ಕಡೆಯಲ್ಲಿ ಜಿಹಾದಿ ಸಂಸ್ಕೃತಿಯವರು ಮೊದಲು ಹಲ್ಲೆ ನಡೆಸಿದ್ದಾರೆ. ನಂತರ ಯುವಕರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಹುಣಸೂರು ತಾಲೂಕು ಮೈಸೂರು ನಗರಕ್ಕಿಂತ ವೇಗವಾಗಿ ಬೆಳೆಯುತ್ತಿದೆ. ಕೇರಳಕ್ಕೂ ಹತ್ತಿರದಲ್ಲಿದ್ದು ಹೀಗಾಗಿ ಎರಡನೇ ಭಟ್ಕಳ ಆಗುತ್ತಿದೆ. ಯುವಕರ ಚಟುವಟಿಕೆ ಬಗ್ಗೆ ಪೊಲೀಸರು ನಿಗಾ ಇಡಬೇಕು. ತಪ್ಪಿತಸ್ಥರ ವಿರುದ್ದ ಎಷ್ಟೇ ಪ್ರಭಾವಿಗಳಾಗಿದ್ದರೂ ಮುಲಾಜಿಲ್ಲದೆ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು. ಈ ವೇಳೆ ಸಂಜಯ್ ಮಲ್ಲಪ್ಪ. ಚಂದ್ರಮೌಳಿ. ವಿ.ಎನ್.ದಾಸ್ ಮತ್ತಿತರರಿದ್ದರು.

# ಮೇ 24ರಿಂದ 26 ರವರೆಗೆ ಶ್ರೀಕರುಮಾರಿಯಮ್ಮ ಕರಗ

ಭದ್ರಾವತಿ: ನ್ಯೂಟೌನ್ ಶ್ರೀಕರುಮಾರಿಯಮ್ಮ ನವರ ದೇವಸ್ಥಾನದಲ್ಲಿ 44ನೇ ವರ್ಷದ ಕರಗ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಮೇ 24ರ ಶುಕ್ರವಾರ ದಿಂದ 26 ಭಾನುವಾರ ದವರೆಗೆ ಪ್ರತಿದಿನ ಬೆಳಿಗ್ಗೆ ಪಂಚಾಮೃತ, ಸಹಸ್ರನಾಮ, ಮಂಗಳಾರತಿ, ತೀರ್ಥ ಪ್ರಸಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಮೇ 24 ಬೆಳಿಗ್ಗೆ 9ಕ್ಕೆ ಪುಣ್ಯಾಹ್ನ ಹಾಗೂ ಧ್ವಜಾರೋಹಣ, ಸಂಜೆ 7ಕ್ಕೆ ಕಂಕಣ ಬಂಧನ, ಮೇ25, ಅಮ್ಮನವರಿಗೆ

ಅಭಿಷೇಕ ಮಧ್ಯಾಹ್ನ 12ಕ್ಕೆ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಮೇ 26 ರ ಬೆಳಿಗ್ಗೆ 9 ಕ್ಕೆ ಅಮ್ಮನವರಿಗೆ ಎಳನೀರು ಮತ್ತು ಪಂಚಾಮೃತ ಅಭಿಷೇಕ ನಡೆಯಲಿವೆ. ಭಕ್ತಾದಿಗಳು ಭಾಗವಹಿಸಿ ಅಮ್ಮನವರ ಕೃಪೆಗೆ ಪಾತ್ರರಾಗುವಂತೆ ಸಮಿತಿ ಮನವಿ ಮಾಡಿದೆ.

# ಜನರ ಸಮಸ್ಯೆ ನಿವಾರಿಸಲು ಜನಸ್ಪಂದನ ಕಾರ್ಯಕ್ರಮ




ಕೆಆರ್ ಪುರ: ನೀರಿನ ಬವಣೆ ನೀಗಿಸಲು ಜಾಗೃತಿ ಜಾಥಾ ಹಾಗೂ ಜನರ ಸಮಸ್ಯೆ ನಿವಾರಿಸಲು ಜನಸ್ಪಂದನ ಕಾರ್ಯಕ್ರಮ ವನ್ನು ಎಸ್‌ಕೆಎಫ್ ಫೌಂಡೇಶನ್ ವತಿಯಿಂದ ಮೇ 18ರಂದು ಹಮ್ಮಿಕೊಳ್ಳಲಾಗಿದೆ ಎಂದು ಎಸ್‌ಕೆಎಫ್‌ನ ಅಧ್ಯಕ್ಷೆ ಶಾಂತ ಕೃಷ್ಣಮೂರ್ತಿ ಅವರು ತಿಳಿಸಿದರು.

ನಗರದ ಎನ್‌ಆರ್‌ಐ ಬಡಾವಣೆಯ ತಮ್ಮ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಮೇ 18ರಂದು ಬೆಳಗ್ಗೆ 6.30ಕ್ಕೆ ಎನ್‌ಆರ್‌ಐ ಬಡಾವಣೆಯ ಜ್ಯುಬಿಲಿ ಶಾಲೆಯಿಂದ ಜಾಗೃತಿ ಜಾಥಾ ಆರಂಭವಾಗಲಿದೆ ಎಂದರು.

ಬೇಸಿಗೆಯಲ್ಲಿ ಜನರು ನೀರಿಗಾಗಿ ಪರದಾಡಿದ್ದನ್ನು ಪ್ರತಿಯೊಬ್ಬರೂ ಅನುಭವಿಸಿದ್ದೀರ ಹಾಗೂ ನೋಡಿದ್ದೀರ ಈ ಸಮಸ್ಯೆಯನ್ನು ನಿವಾರಿಸುವ ನಿಟ್ಟಿನಲ್ಲಿ ಜಾಗೃತಿ ಜಾಥಾ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ಪ್ರತಿಯೊಬ್ಬರೂ ಮಿತವಾಗಿ ನೀರು ಬಳಕೆ ಮಾಡಿ ಹಾಗೂ ಇಂಗು ಗುಂಡಿಗಳನ್ನು ನಿರ್ಮಿಸುವ ಮೂಲಕ ಅಂತರ್ಜಲ ವೃದ್ದಿಸಿಕೊಳ್ಳಿ ಎಂದು ಹೇಳಿದರು.

ರಾಮಮೂರ್ತಿನಗರ ಅರ್ಧಭಾಗಕ್ಕೆ ಕಾವೇರಿ ನೀರಿನ ಸಂಪರ್ಕ ಇದೆ ಉಳಿದ ಭಾಗ ಅಂತರ್ಜಲ ನಂಬಿ ಕೊಂಡಿದ್ದಾರೆ ಆದ್ದರಿಂದ ಅಂತರ್ಜಲ ವೃದ್ಧಿಸಿಕೊಳ್ಳಲು ಕಾರ್ಯಕ್ರಮದಲ್ಲಿ ಭಾಗವಹಿಸಿ ಎಂದರು.

ಎಸ್ ಕೆಎಫ್ ಸಂಸ್ಥಾಪಕ ಸದಸ್ಯ ಕಲ್ಕೆರೆ ಕೃಷ್ಣಮೂರ್ತಿ ಮಾತಮಾಡಿ, ಮನೆ ಮೇಲೆ ಬಿದ್ದ ನೀರು ವೇಸ್ಟ್ ಆಗಿ ಹರಿದು ಹೋಗದಂತೆ ನೋಡಿಕೊಳ್ಳಿ, ನೀರನ್ನು ಹಿಡಿದಿಟ್ಟುಕೊಂಡು ಮರು ಬಳಕೆ ಮಾಡಿ ಹೆಚ್ಚಿನ ನೀರನ್ನು ಮನೆಯ ಬಳಿಯೇ ಇಂಗುವಂತೆ ಮಾಡಿ ಅಂತರ್ಜಲ ವೃದ್ಧಿಸಿಕೊಳ್ಳಿ ಎಂದರು.

ಮೇ 18ರಂದು ಬೆಳಗ್ಗೆ 6.30ಕ್ಕೆ ಜಾಥಾ ಆರಂಭ ವಾಗಲಿದ್ದು ಸುಮಾರು ಐದು ಕಿ.ಮೀ ಸಾಗಲಿದೆ. ಬಳಿಕ ಜ್ಯುಬಿಲಿ ಶಾಲೆ ಬಳಿ ಬಿಡಬ್ಲ್ಯುಎಸ್ ಎಸ್‌ಬಿ, ಬಿಬಿಎಂಪಿ ಆಯುಕ್ತರು ಹಾಗೂ ಶಾಸಕ ಬೈರತಿ ಬಸವರಾಜ ಅವರೊಂದಿಗೆ ಸ್ಥಳೀಯ ಸಮಸ್ಯೆಗಳ ಕುರಿತು ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಸಾರ್ವಜನಿಕರು ಎದುರಿಸುತ್ತಿರುವ ರಸ್ತೆ, ಚರಂಡಿ, ತೆರಿಗೆ, ನೀರು, ಕಾವೇರಿ, ಯುಜಿಡಿ, ಅಕ್ರಮ ಸಕ್ರಮ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪೃಥ್ವಿ, ಆನಂದ್, ಸುಬ್ರಮಣಿ, ಮೈಕಲ್, ಸತೀಶ್, ಹೀರೇಗೌಡ ಮತ್ತಿತರರಿದ್ದರು.

# ಪಿಯು ದಾಖಲಾತಿಗೆ ಆಹ್ವಾನ

ಚಿಕ್ಕಬಳ್ಳಾಪುರ: 2024-25ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ವಸತಿ/ಕಾಲೇಜುಗಳ ಪ್ರಥಮ ಪಿ.ಯು.ಸಿ (ವಿಜ್ಞಾನ) ದಾಖಲಾತಿಗಾಗಿ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಮೇ 27 ರವರೆಗೆ ಸಂಬಂಧಪಟ್ಟ ಮೊರಾರ್ಜಿದೇಸಾಯಿ ಪಿ.ಯು.ಸಿ ಕಾಲೇಜುಗಳಲ್ಲಿ ಅಥವಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಪಡೆದು ಸಂಬಂಧಪಟ್ಟ ವಸತಿ ಶಾಲೆಗಳ ಪ್ರಾಂಶುಪಾಲರಿಗೆ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಮೊರಾರ್ಜಿದೇಸಾಯಿ ಪಿ.ಯು.ಸಿ. ವಸತಿ ಕಾಲೇಜಿನ ಪ್ರಾಂಶುಪಾಲರ ಮೊ. 8867568059, 9036800610 ಮತ್ತು ಹಿಂದುಳಿದ ವರ್ಗಗಳ ಮೊರಾರ್ಜಿದೇಸಾಯಿ ಪಿ.ಯು.ಸಿ. ವಸತಿ ಕಾಲೇಜಿನ ಪ್ರಾಂಶುಪಾಲರ ಮೊ. 9731613955ಗೆ ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ತೇಜಾನಂದರೆಡ್ಡಿ ಅವರು ತಿಳಿಸಿದ್ದಾರೆ.

ಸ್ಥಳೀಯ



# ಕೆರೆಗಳಲ್ಲಿ ಅಕ್ರಮ ಮಣ್ಣು ಸಾಗಾಟ ಮಾಡಿದರೆ ಸೂಕ್ತ ಕ್ರಮ

ಕೊರಟಗೆರೆ:- ಅಕ್ರಮವಾಗಿ ಕೆರೆಗಳಲ್ಲಿ ಮಣ್ಣು ತೆಗೆದರೆ ಅಂತವರ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲೆಯ ಎಲ್ಲಾ ತಹಸೀಲ್ದಾರ್ ಅವರಿಗೆ ಸೂಚನೆ ನೀಡಲಾಗಿದೆ. ಮಣ್ಣನ್ನ ತೆಗೆದು ಕೆರೆಯ ಸ್ವರೂಪವನ್ನ ಹಾಳು ಮಾಡಿ ಕೆರೆಯಲ್ಲಿ ನೀರು ಇಲ್ಲದೆ ಜಾನುವಾರುಗಳಿಗೆ ಹಾಗೂ ರೈತರಿಗೆ ನೀರಿನ ಕೊರತೆ ಉಂಟಾಗುತ್ತದೆ ಎಂದು ತುಮಕೂರು ಜಿಲ್ಲಾಧಿಕಾರಿ ಶುಭಕಲ್ಯಾಣ್ ತಿಳಿಸಿದರು.

ಕೊರಟಗೆರೆ ತಾಲೂಕಿನ ಬುಕ್ಕಾಪಟ್ಟಣ, ಕ್ಯಾಮೇನಹಳ್ಳಿ ಆಂಜನೇಯಸ್ವಾಮಿ ದೇವಸ್ಥಾನದ ಅವರಣದಲ್ಲಿ ಮೇವು ಬ್ಯಾಂಕ್‌ಗೆ ಬೇಟಿ ನೀಡಿ ಮಾತನಾಡಿದರು.

ರೈತರ ಹೆಸರು ಹೇಳಿಕೊಂಡು ಅಕ್ರಮವಾಗಿ ಕೆರೆಯಲ್ಲಿರುವ ಮಣ್ಣನ್ನ ಸಾಗಾಟ ಮಾಡಿ



ಕೆರೆಯ ಫಲವತ್ತಾದ ಮಣ್ಣನ್ನ ತೆಗೆದು ಕೆರೆಯ ಸ್ವರೂಪವನ್ನ ಹಾಳು ಮಾಡಿ ಕೆರೆಯಲ್ಲಿ ನೀರು ನಿಲ್ಲದೇ ಜನ ಜಾನುವಾರುಗಳಿಗೆ ಹಾಗೂ ರೈತರಿಗೆ ನೀರಿನ ಕೊರತೆ ಉಂಟಾಗುತ್ತದೆ ಎನ್ನವ ಉದ್ದೇಶದಿಂದ ಯಾರು ಕೂಡ ಮಣ್ಣನ್ನ ತೆಗೆಯದಂತೆ ಸೂಚನೆ ನೀಡಿದ್ದು, ಯಾರಾದರೂ ಮಣ್ಣು ಸಾಗಾಟ ಮಾಡುವುದು ಕಂಡು ಬಂದರೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಕ್ರಮ ಜರುಗಿಸಿ ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಈಗಾಗಲೇ ಎಲ್ಲಾ ತಾಲೂಕುಗಳನ್ನ ಬರಗಾಲ ಘೋಷಣೆಯಾಗಿದ್ದು, ಜಿಲ್ಲೆಯ 25 ಕಡೆ ಮೇವು ಬ್ಯಾಂಕ್ ತೆರೆಯಾಗಿದ್ದು, ಈಗಾಗಲೇ 6 ಸಾವಿರ ಟನ್ ಮೇವನ್ನ ವಿತರಣೆ ಮಾಡಲಾಗಿದೆ.

ಮೇವು ಬ್ಯಾಂಕ್‌ಗಳಲ್ಲಿ ಯಾವುದೆ ಕೊರತೆ ಆಗದಂತೆ ಅಗತ್ಯತೆಗೆ ತಕ್ಕಂತೆ ಮೇವು ನೀಡಲಾಗುತ್ತಿದೆ. ಕೊರಟಗೆರೆ ತಾಲೂಕಿನ ಬುಕ್ಕಾಪಟ್ಟಣ ಹಾಗೂ ಕ್ಯಾಮೇನಹಳ್ಳಿ ಗ್ರಾಮದಲ್ಲಿ ಮೇವು ವಿತರಣೆ ಮಾಡಲಾಗಿದೆ. ಕೊರಟಗೆರೆ ತಾಲೂಕಿನಲ್ಲಿ ಮಳೆ ಕಡಿಮೆ ಬಂದಿರುವ ಕಾರಣ ಖುದ್ದು ರೈತರನ್ನ ಬೇಟಿ ನೀಡಿ ಅಲ್ಲಿನ ಪರಿಸ್ಥಿತಿ ತಿಳಿದುಕೊಳ್ಳಲು ಬೇಟಿ ನೀಡಲಾಗಿದೆ ಎಂದರು.

ಮೈಕ್ರೋ ಫೈನಾನ್ಸ್ ಸಿಬ್ಬಂದಿಗಳು ರೈತರ ಮೇಲೆ ಹಾಗೂ ಕೂಲಿ ಕಾರ್ಮೀಕರ ಮೇಲೆ ಹಣಕ್ಕೆ ಒತ್ತಾಯ ಮಾಡುಂತಿಲ್ಲ ಈಗಾಗಲೆ ರಾಜ್ಯದಲ್ಲಿ ಬರಗಾಲ ಘೋಷಣೆ ಆಗಿರುವುದರಿಂದ ಯಾರು ಕೂಡ ಒತ್ತಾಯ ಮಾಡುವಂತಿಲ್ಲ. ಹಾಗೇನಾದರೂ ಒತ್ತಾಯ ಮಾಡಿದರೆ ಅವರ ವಿರುದ್ದ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇದೆ ಸಂದರ್ಭದಲ್ಲಿ ಮಧುಗಿರಿ ಉಪವಿಭಾಗಾಧಿಕಾರಿ ಗೂಟೂರು ಶಿವಪ್ಪ, ತಹಸೀಲ್ದಾರ್ ಮಂಜುನಾಥ್, ಪಶು ಸಂಗೋಪನೆ ವೈದ್ಯ ದತ್ತಣ್ಣ, ಕಂದಾಯ ನಿರೀಕ್ಷಕ ಅಧಿಕಾರಿ ಜಯಪ್ರಕಾಶ್, ಗ್ರಾಮ ಲೆಕ್ಕಾಧಿಕಾರಿಗಳಾದ ಭಾನುಪ್ರಕಾಶ್, ಸಲ್ಮಾನ್, ಬಸವರಾಜು, ಜಯನಂದ್, ಸಣ್ಣರಂಗಪ್ಪ, ಮೂರ್ತಿ, ರಂಗಪ್ಪ, ಲೋಕೇಶ್, ರಘು ಸೇರಿದಂತೆ ಇತರರು ಇದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjaneevartheepaper.com
16 THURSDAY MAY 2024
16 ಗುರುವಾರ ಮೇ 2024

# ಜಗತ್ತನ್ನು ಕಾಪಾಡುವ ಭಗವಾನ್ ವಿಷ್ಣು ಉಗ್ರ ನರಸಿಂಹನ ಅವತಾರವೇ ಲಕ್ಷ್ಮೀ ನರಸಿಂಹ ಸ್ವಾಮಿ

ದೇವನಹಳ್ಳಿ: ಜಗತ್ತನ್ನು ಕಾಪಾಡುವ ಭಗವಾನ್ ವಿಷ್ಣು ಉಗ್ರ ನರಸಿಂಹನ ಅವತಾರವನ್ನು ತೆಗೆದುಕೊಂಡನು ಎನ್ನುವ ನಂಬಿಕೆಯಿದೆ. ಇತಿಹಾಸ ಪುಟಗಳಲ್ಲಿ ಕಂಡು ಕೇಳಿದ್ದೇವೆ ಎಂದು ಮಾಜಿ ಶಾಸಕ ಪಿಳ್ಳ ಮುನಿಶಾಮಪ್ಪ ಅವರು ತಿಳಿಸಿದರು.

ದೇವನಹಳ್ಳಿ ತಾಲೂಕಿನ ಕಾರಹಳ್ಳಿಗೆ ಸಮೀಪವಿರುವ ಗೋಪಿನಾಥ ಬೆಟ್ಟದಲ್ಲಿ ನೆಲೆಸಿದ ಪುರಾತನ ಪ್ರಸಿದ್ಧ ಲಕ್ಷ್ಮಿ ನರಸಿಂಹ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಅವರು. ದೇಶದಲ್ಲಿ ಎನ್ ಡಿ ಎ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವುದರಲ್ಲಿ ಯಾವುದೇ ಸಂಶಯವಿಲ್ಲ. ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಕೂಡ ಗೆಲುವಿನ ಮುನ್ಸೂಚನೆ ದಟ್ಟವಾಗಿದೆ ರಾಷ್ಟ್ರ ನಿರ್ಮಾಣ ಹಾಗೂ ದೇಶದ ಪ್ರಗತಿಗೆ ಬಿಜೆಪಿ ಆಡಳಿತ ಅನಿವಾರ್ಯ ಹಾಗಾಗಿ ಬಹಳ ಪ್ರಾಮಾಣಿಕವಾಗಿ ಪ್ರತಿ ಹಳ್ಳಿ ಹಳ್ಳಿಗೆ ಭೇಟಿ ನೀಡಿ ನಗರ ಪ್ರದೇಶಗಳಲ್ಲಿ ಮತದಾರರಿಗೆ ಅಗತ್ಯ ಜಾಗೃತಿ ಮೂಡಿ ಸುವ ಮೂಲಕ ಉತ್ತಮ ರೀತಿಯಲ್ಲಿ ಸುಧಾಕರ್ ಅವರ ಪರವಾಗಿ ಕೆಲಸ ಮಾಡಿದ್ದೇವೆ ಲಕ್ಷ್ಮಿ ನರಸಿಂಹ ಸ್ವಾಮಿಯ ಬಳಿ ಕೂಡ ಪ್ರಾರ್ಥಿಸಿದ್ದೇನೆ.



ಪುರಾಣಗಳ ಪ್ರಕಾರ, ಭಗವಾನ್ ವಿಷ್ಣು ಉಗ್ರ ನರಸಿಂಹನ ರೂಪದಲ್ಲಿ ಅವತರಿಸಿದನು ಮತ್ತು ಧರ್ಮ ವನ್ನು ರಕ್ಷಿಸಲು ವೈಶಾಖ ಮಾಸದ ಶುಕ್ಲ ಪಕ್ಷದ ಚತುರ್ದ ಶಿಯಂದು ಹಿರಣ್ಯಕಶ್ಯಪುವನ್ನು ಸಂಹಾರ ಮಾಡಿದ ನೆಂದು ಹೇಳಲಾಗುತ್ತದೆ. ನರಸಿಂಹ ಅವತಾರ ದಲ್ಲಿ ಭಗವಾನ್ ವಿಷ್ಣು ಅರ್ಧ ಸಿಂಹ ಮತ್ತು ಅರ್ಧ ಮಾನವನಾಗಿ ಅವತರಿಸಿದ ರೂಪವಾಗಿದೆ.

ಐತಿಹಾಸಿಕ ಕ್ಷೇತ್ರಗಳಲ್ಲಿ ಒಂದಾದ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿಯ 22ನೇ ವರ್ಷದ ಜಯಂತಿಯು ಸುತ್ತ-ಮುತ್ತಲಿನ ಸಹಸ್ರಾರು ಸಂಖ್ಯೆಯಲ್ಲಿ ತಮ್ಮೆಡೆಗೆ ಕರೆಸಿಕೊಳ್ಳುವ ಮೂಲಕ ಇಷ್ಟಾರ್ಥಗಳನ್ನು ಭಕ್ತಾದಿ ಗಳಿಗೆ ಕಲ್ಪಿಸುವ ಶಕ್ತಿ ಸಂಪನ್ನ ದೇವರಾಗಿದೆ.

ಕಳೆದ ಹಲವು ವರ್ಷಗಳಿಂದ ಪೂಜೆ ಪುನಸ್ಕಾರ ಸೇರಿದಂತೆ ದೂರ ದೂರದಿಂದ ಬರುವ ಭಕ್ತಾದಿಗಳಿಗಾಗಿ ಇಲ್ಲಿ ಬರುವ ಭಕ್ತರಿಗೆ ನಿತ್ಯ ತೀರ್ಥ, ಪ್ರಸಾದ, ಅನ್ನ ದಾಸೋಹ ಧಾರ್ಮಿಕ ವಿಧಿ, ವಿಧಾನಗಳನ್ನು ನಿರ್ವಿಘ್ನ ಶಾಂತಿ, ಸೌಹಾರ್ದತೆಯಿಂದ ಬಹಳ ಅದ್ದೂರಿಯಾಗಿ ನಡೆಯುತ್ತಾ ಬಂದಿರುತ್ತದೆ.

ಲಕ್ಷ್ಮಿ ನರಸಿಂಹ ಸ್ವಾಮಿಯ ಜಯಂತಿಯ ಮುನ್ನ ದೇವರಿಗೆ ನಮ್ಮ ಪೂರ್ವಜರ ಕಾಲದಿಂದಲೂ ಇಲ್ಲಿಯವರೆಗೂ ಪೂಜೆ ಪುನಸ್ಕಾರಗ ಳನ್ನು ಕುಟುಂಬ ಸಮೇತ ಆಗಮಿಸಿ ದೇವರಿಗೆ ಸೇವೆಯನ್ನು ಕಲ್ಪಿಸಿ ಕಷ್ಟಗಳಲ್ಲಿ ಸದಾ ನಮ್ಮ ಜೊತೆ ಇರುವಂತೆ ಬೇಡಿಕೊಳ್ಳುತ್ತ ಬಂದಿರುತ್ತೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲಕ್ಷ್ಮಿ ನರಸಿಂಹ ಸ್ವಾಮಿ ಭಕ್ತಾದಿಗಳಾದ ಉಮಾ ಪಿಳ್ಳಮುನಿಶಾಮಪ್ಪ, ಹೆಗ್ಗನಹಳ್ಳಿ ಮಂಜುನಾಥ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಗೋಪಾಲಸ್ವಾಮಿ, ಜೆಡಿಎಸ್ ತಾಲೂಕು ಉಪಾಧ್ಯಕ್ಷ ಹನುಮಂತಪ್ಪ ಕರ್ನಾಟಕ ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿಯ ತಾಲೂಕು ಅಧ್ಯಕ್ಷ ಅಣ್ಣೇಶ್ವರ ವೆಂಕಟೇಶ್ ಮಾಜಿ ಅಧ್ಯಕ್ಷ ಹ್ಯಾಡಾಳ ದೇವರಾಜ್, ಕದಿರಪ್ಪ, ಹಿರಿಯ ಮುಖಂಡರಾದ ಅಣ್ಣೇಶ್ವರ ವೇಣುಗೋಪಾಲ್, ವೆಂಕಟಗಿರಿಕೋಟೆ ಮುನಿರಾಜು, ಯುವ ಮುಖಂಡ ರಾದ ಬೈಚಾಪುರ ಕುಮಾರ್, ನರಸಿಂಹ ಮೂರ್ತಿ, ದೇವನಹಳ್ಳಿ ನಟರಾಜ್, ಸೋಲೂರು ನಾಗರಾಜ್, ಸಿಂಗ್ರಳ್ಳಿ ನರಸಿಂಹಯ್ಯ, ಭುವನಹಳ್ಳಿ ಆನಂದ್ ಸಾದಹಳ್ಳಿ ಮಂಜುನಾಥ್ ಸಾವಕನಹಳ್ಳಿ ಶ್ರೀನಿವಾಸ್ ಸೇರಿದಂತೆ ಇತರರು ಹಾಜರಿದ್ದರು.

# ಮನಸ್ಸು-ದೇಹದ ಸಮನ್ವಯತೆ ಸಾಧಿಸಿದರೆ ಉತ್ತಮ ಆರೋಗ್ಯ; ವರಲಕ್ಷ್ಮಿ

ಶಿರಾ: ಬದಲಾದ ಆಹಾರ ಶೈಲಿ ಜೀವನ ಪದ್ಧತಿ ನಮ್ಮ ಆಲೋಚನೆಗಳಿಂದ ಮಾನಸಿಕವಾಗಿ ಹಾಗೂ ದೈಹಿಕವಾಗಿ ನಮ್ಮ ಆರೋಗ್ಯ ಕ್ಷಣಿಸುತ್ತಿದೆ ಇನ್ನಾದರೂ ನಾವುಗಳು ಎಚ್ಚೆತ್ತುಕೊಂಡು ಉತ್ತಮ ಗುಣಮಟ್ಟದ ಜೀವನವನ್ನು ಮಾಡುವುದರ ಮೂಲಕ ನಮ್ಮ ಮನಸ್ಸನ್ನು ದೇಹದ ಸಮನ್ವಯತೆ ಸಾಧಿಸಿ ಮಾದರಿ ಜೀವನ ನಡೆಸಬೇಕೆಂದು ಅರಿವಿನ ಅಂಗಳ ಫೌಂಡೇಶನ್ ಅಧ್ಯಕ್ಷರಾದ ವರಲಕ್ಷ್ಮಿ ತಿಳಿಸಿದರು.

ಅವರು ಶಿರಾ ತಾಲ್ಲೂಕು ಕಡವಿಗೆರೆ ಗ್ರಾಮದಲ್ಲಿ ಅರವಿನಂಗಳ ಫೌಂಡೇಶನ್, ದೃಷ್ಟಿಧಾಮ ಕಣ್ಣಿನ ಆಸ್ಪತ್ರೆ ಸಂತೆಪೇಟೆ ಶಿರಾ, ಸಂಜೀವಿನಿ ರಕ್ತ ನಿಧಿ ಕೇಂದ್ರ ತುಮಕೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಭಾಗದ ಜನರಿಗೆ ಉತ್ತಮ ಗುಣಮಟ್ಟದ ಸೇವೆ ನೀಡಬೇಕೆಂಬ ಉದ್ದೇಶದಿಂದ ನಮ್ಮ ಅರಿವಿನ ಅಂಗಳ ಫೌಂಡೇಶನ್ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಾ ಕಂಡ ಹರಿವು ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಶಿಬಿರದಲ್ಲಿ ಸುಮಾರು 40ಕ್ಕೂ ಹೆಚ್ಚು ಜನ ರಕ್ತದಾನ ಮಾಡಿದರು. 300ಕ್ಕೂ ಹೆಚ್ಚು ಜನ ಆರೋಗ್ಯ ಶಿಬಿರದಲ್ಲಿ ಪಾಲ್ಗೊಂಡು ವಿವಿಧ ರಕ್ತದೊತ್ತಡ ಮಧುಮೇಹ ಕಣ್ಣಿನ ತಪಾಸಣೆ ಇತರೆ ಸೌಲಭ್ಯವನ್ನು ಪಡೆದುಕೊಂಡರು. ದೃಷ್ಟಿದಾಮ ಕಣ್ಣಿನ ಆಸ್ಪತ್ರೆ ವತಿಯಿಂದ ಉಚಿತವಾಗಿ ನೂರಕ್ಕೂ ಹೆಚ್ಚು ಜನರಿಗೆ ಉಚಿತವಾಗಿ ಕನ್ನಡ ನೀಡುವುದಾಗಿ ವ್ಯವಸ್ಥಾಪಕರು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಕುಸುಮ ಗ್ಯಾಸ್ ಏಜೆನ್ಸಿ ಮಧುಗಿರಿಯ ಶಿವಕುಮಾರ, ನಿವೃತ್ತ ಆರೋಗ್ಯ ನಿರೀಕ್ಷಕರಾದ ರಾಮಲಿಂಗಪ್ಪ, ಶಿಕ್ಷಣ ಇಲಾಖೆಯ ಜಯರಾಮ್, ದಾಸಣ್ಣ, ಮಾಜಿ ತಾ.ಪಂ. ಸದಸ್ಯರಾದ ಕಾಳೇಗೌಡ, ಬೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಹರೀಶ್ ಕುಮಾರ್, ನಿವೃತ್ತ ಸೈನಿಕರಾದ ಸೋಮಶೇಖರ್. ಆರ್.ವಿ, ಕಡವಿಗೆರೆಯ ಶಿಕ್ಷಕರಾದ ಕೆ.ಸಿ.ಮಹೇಶ್, ಶಿರಾದ ಯುವರಾಜ್ ಯಾದವ್, ಸೇರಿದಂತೆ ಅರಿವಿನ ಅಂಗಳದ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

# ಜಿಟಿಟಿಸಿ ಡಿಪ್ಲೋಮ ಕೋರ್ಸ್‌ಗಳಿಗೆ ಆಹ್ವಾನ

ಗೌರಿಬಿದನೂರು: ತಾಲ್ಲೂಕಿನ ಕುಡುಮಲಕುಂಟೆ ಕೈಗಾರಿಕಾ ಪ್ರದೇಶದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ( ಜಿಟಿಟಿಸಿ) ಯಲ್ಲಿ 2024-25 ನೇ ಶೈಕ್ಷಣಿಕ ಸಾಲಿನ ತಾಂತ್ರಿಕ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕೆ ಎಸ್ಸೆಸ್ಸೆಲ್ಸಿ ಪಾಸಾದ ವಿದ್ಯಾರ್ಥಿಗಳಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಜಿಟಿಟಿಸಿ ಕೇಂದ್ರದಲ್ಲಿ 3+1 ವರ್ಷದ ಡಿಪ್ಲೋಮಾ ಇನ್ ಟೂಲ್ & ಡೈಮೇಕಿಂಗ್, ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್ ಮತ್ತು ಡಿಪ್ಲೋಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಐಟಿಐ ಮತ್ತು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇರವಾಗಿ ಏರಡನೇ ವರ್ಷದ ಡಿಪ್ಲೋಮಾ ಕೋರ್ಸ್ ಗೆ ಪ್ರವೇಶ ಪಡೆಯಬಹುದಾಗಿದೆ.ಜಿಟಿಟಿಸಿ ಕೇಂದ್ರದಲ್ಲಿ 3+1 ವರ್ಷದ ಡಿಪ್ಲೋಮಾ ಇನ್ ಟೂಲ್ & ಡೈಮೇಕಿಂಗ್, ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್ ಮತ್ತು ಡಿಪ್ಲೋಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಐಟಿಐ ಮತ್ತು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇರವಾಗಿ ಏರಡನೇ ವರ್ಷದ ಡಿಪ್ಲೋಮಾ ಕೋರ್ಸ್ ಗೆ ಪ್ರವೇಶ ಪಡೆಯಬಹುದಾಗಿದೆ.

ಜಿಟಿಟಿಸಿ ಕೇಂದ್ರದಲ್ಲಿ 3+1 ವರ್ಷದ ಡಿಪ್ಲೋಮಾ ಇನ್ ಟೂಲ್ & ಡೈಮೇಕಿಂಗ್, ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್ ಮತ್ತು ಡಿಪ್ಲೋಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.ಐಟಿಐ ಮತ್ತು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇರವಾಗಿ ಏರಡನೇ ವರ್ಷದ ಡಿಪ್ಲೋಮಾ ಕೋರ್ಸ್ ಗೆ ಪ್ರವೇಶ ಪಡೆಯಬಹುದಾಗಿದೆ.

ಕೆಇಎ (KEA) ಮುಖಾಂತರ ಆನ್‌ಲೈನ್‌ನಲ್ಲಿ ಜಿಟಿಟಿಸಿ ಡಿಪ್ಲೋಮಾ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಲು ಜಿಟಿಟಿಸಿ ಗೌರಿಬಿದನೂರು ಕೇಂದ್ರದಲ್ಲಿಯೇ ಉಚಿತವಾಗಿ ಅವಕಾಶ ಮಾಡಿಕೊಡಲಾಗುವುದು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಮೇ 27 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ 7349342369, 8073909409, 8884585436, 9731684439 ಸಂಪರ್ಕಿಸುವಂತೆ ಪ್ರಾಂಶುಪಾಲ ಹರೀಶ್ ತಿಳಿಸಿದ್ದಾರೆ.

# ರಸ್ತೆಯೋ... ಕೆರೆಯೋ... ದಾರಿಯೇ ಕಾಣುತ್ತಿಲ್ಲ...



ತಿಪಟೂರು: ನಗರದ ಮಾರನಗೆರೆ ಕೊರಚರ ಕಾಲೋನಿ 16 ನೇ ವಾರ್ಡ್‌ನಲ್ಲಿ ಮಳೆ ಬಂದರೆ ಚರಂಡಿ ನೀರು ಮುಂದೆ ಹೋಗದಂತೆ ಕಟ್ಟಿಕೊಂಡಿದ್ದು ಅಧಿಕಾರಿ ವರ್ಗಕ್ಕೆ ಎಷ್ಟೇ ಮನವಿಯನ್ನು ಸಲ್ಲಿಸಿದರೂ ಇತ್ತ ಕಡೆ ಸುಳಿಯುತ್ತಿಲ್ಲ. ಮೊನ್ನೆ ಬಂದ ಮಳೆಯ ನೀರು ಮುಂದೆ ಹೋಗದೆ ರಸ್ತೆಯಲ್ಲಾ ಕೆರೆಯಂತಾಗಿ ದಾರಿ ಕಾಣದೆ ವಾಹನ ಸವಾರರು ಪರದಾಡುವಂತಾಗಿದೆ.

ಅದೆಷ್ಟೋ ಸಾರ್ವಜನಿಕರು ವಾಹನಗಳಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ ಇಷ್ಟಾದರೂ ನಗರಸಭೆ ಗಮನಹರಿಸುತ್ತಿಲ್ಲ. ಜೊತೆಗೆ ಮುಖ್ಯ ರಸ್ತೆಯ ಪಕ್ಕದಲ್ಲಿ ರಾಜು ಎನ್ನುವವರು ಕಳೆದ ಎರಡು ವರ್ಷದಿಂದ ಮನೆಯನ್ನು ಕಟ್ಟುತ್ತಿದ್ದು ಪೂರ್ಣಗೊಳಿಸಿಲ್ಲ. ಮನೆ ಕಟ್ಟಡಕ್ಕೆ ಬಳಸಲು ತಂದಿರುವ ಮಣ್ಣನ್ನು ರಸ್ತೆ ಮೇಲೆ ಹಾಕಿರುವುದರಿಂದ ಮಳೆ ಬಂದರೆ ಜಾರುಬಂಡಿಯಂತಾಗಿ ಹತ್ತರು ಜನರು ಪೆಟ್ಟು ಮಾಡಿಕೊಂಡಿದ್ದಾರೆ.

ಮನೆಯ ಮಾಲೀಕರಿಗೆ ಹಾಗೂ ನಗರಸಭೆ ಅಧಿಕಾರಿಗಳಿಗೂ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಮಣ್ಣನ್ನು ಮನೆ ಪೂರ್ಣಗೊಳಿಸಲೂ ಬಳಸಿಲ್ಲ ಜೊತೆಗೆ ರಸ್ತೆಯ ಮೇಲಿರುವ ಮಣ್ಣನ್ನು ತೆರವುಗೊಳಿಸದಿರುವುದು ಕಳೆದ 2ವರ್ಷದಿಂದ ವಾಹನ ಸವಾರರು ಪರದಾಡುವಂತಾಗಿದೆ. ಅಧಿಕಾರಿಗಳು ಅದು ನಮ್ಮ ಕೆಲಸವಲ್ಲ ಮನೆ ಮಾಲೀಕರಿಗೆ ತಿಳಿಸುವ ಕೆಲಸ ಮಾಡುತ್ತೇವೆಂದು 2 ವರ್ಷದಿಂದಲೂ ಹೇಳಿತ್ತಿದ್ದಾರೆ ಆದರೆ ಸಮಸ್ಯೆ ಬಗೆಹರಿದಿಲ್ಲವೆಂದು ಅಖಿಲ ಕೊರಚ ಮಹಾಸಂಘದ ತಾ.ಅಧ್ಯಕ್ಷ ಸತೀಶ್ ತಿಳಿಸಿದರು.

# ಟಿ. ಹೊಸಹಳ್ಳಿಯಲ್ಲಿ ಮೇವು ಬ್ಯಾಂಕ್ ಪ್ರಾರಂಭ

ಕುಣಿಗಲ್: ಕುಣಿಗಲ್ ತಾಲ್ಲೂಕಿನ ಕಸಬಾ ಹೋಬಳಿ ವ್ಯಾಪ್ತಿಯ ಟಿ,ಹೊಸಹಳ್ಳಿ ಗ್ರಾಮದ ಸಮುದಾಯ ಭವನದಲ್ಲಿ ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತದ ವತಿಯಿಂದ ದಿನಾಂಕ 15/05/2024 ರಿಂದ ಮೇವು ಬ್ಯಾಂಕ್ ಪ್ರಾರಂಭಿಸಲಾಗುತ್ತಿದೆ ಎಂದು ತಹಶೀಲ್ದಾರ್ ವಿಶ್ವನಾಥ್ ತಿಳಿಸಿದ್ದಾರೆ.

ಕುಣಿಗಲ್ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು



ರಾಜ್ಯ ಸರ್ಕಾರ ಘೋಷಣೆ ಮಾಡಿದ್ದು ತಾಲ್ಲೂಕಿನ ಜಾನುವಾರು ಸಂರಕ್ಷಣೆ ಮಾಡುವುದರ ಜೋತೆಗೆ ರಾಸುಗಳಿಗೆ ಮೇವಿನ ಕೊರತೆ ನೀಗಿಸಲು ಮೇವಿನ ಬ್ಯಾಂಕ್ ಪ್ರಾರಂಭ ಮಾಡಲಾಗುತ್ತಿದ್ದು ಒಂದು ರಾಸುವಿಗೆ ಒಂದು ದಿನಕ್ಕೆ ಆರು ಕೆ,ಜಿ ಯಂತೆ 7 ದಿನಕ್ಕೆ 42 ಕೆ.ಜಿ ಯಂತೆ ಪ್ರತಿ ಕೆ,ಜಿ ಮೇವಿಗೆ ಎರಡು ರೂಪಾಯಿಯಂತೆ ರೈತರಿಗೆ ವಿತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಮೂರು ದಿನಗಳ ಅನುಭವಾತ್ಮಕ ಧ್ಯಾನ ಯೋಗ ಶಿಬಿರ

ಶಿರಾ: ಶಿರಾ ಜ್ಯೋತಿನಗರದ ಕಾಳಿದಾಸ ಹೈಸ್ಕೂಲ್ ರಸ್ತೆಯಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಮೇ 17 ರಿಂದ ಮೇ 19 ರವರೆಗೆ ಮೂರು ದಿನಗಳ ಕಾಲ ಅನುಭವಾತ್ಮಕ ಧ್ಯಾನ ಯೋಗ ಶಿಬಿರ ಆಯೋಜಿಸಲಾಗಿದೆ ಎಂದು ರಾಜಯೋಗಿ ಡಾ.ಪಿ.ಹೆಚ್.ಮಹೇಂದ್ರಪ್ಪ ತಿಳಿಸಿದ್ದಾರೆ.

ಧ್ಯಾನವು ಆಧ್ಯಾತ್ಮಕ ಅರಿವು ಮತ್ತು ಪ್ರಾಚೀನ ಪದ್ದತಿಯಾಗಿದ್ದು, ಆತ್ಮನ ಆಂತರಿಕ ಶಕ್ತಿಗಳನ್ನು ಪುನಃಶ್ಚೇತನಗೊಳಿಸುವ ಕ್ರಿಯಾಗಿದೆ. ಧ್ಯಾನವು ಆಧ್ಯಾತ್ಮಕ ಅರಿವು ಮತ್ತು ಪ್ರಾಚೀನ ಪದ್ದತಿಯಾಗಿದ್ದು, ಆತ್ಮನ ಆಂತರಿಕ ಶಕ್ತಿಗಳನ್ನು ಪುನಃಶ್ಚೇತನಗೊಳಿಸುವ ಕ್ರಿಯಾಗಿದೆ.

ಈ ಶಿಬಿರದಲ್ಲಿ ಭಗವದ್ಗೀತೆಯ ಆಧ್ಯಾತ್ಮಿಕ ಮೌಲ್ಯಗಳು, ಭಗವದ್ಗೀತೆ ಆಧಾರಿತ ಆತ್ಮಸಾಕ್ಷಾತ್ಕಾರ ಮತ್ತು ಪರಮಾತ್ಮ ಸಾಕ್ಷಾತ್ಕಾರ, ಭಾವ ಶುದ್ಧೀಕರಣ ಕ್ರಿಯೆ, ಮನೋ ದೈಹಿಕ ಸಮಸ್ಯೆಗಳಿಂದ ಮುಕ್ತಿ ಮತ್ತು ಯಶಸ್ಸನ್ನು ಪಡೆಯುವುದು ಹೇಗೆ, ರಾಜಯೋಗ ಅಭ್ಯಾಸ, ಧ್ಯಾನಯೋಗ ನೀಡಲಾಗುವುದು. ಜ್ಞಾನ ಪ್ರಾಪ್ತಿಗಾಗಿ ಶಿಬಿರಕ್ಕೆ ಆಸಕ್ತರು ಹಾಜರಾಗಿ. ಶಿಬಿರಕ್ಕೆ ನೊಂದಾಯಿಸಿಕೊಳ್ಳಲು ಮೊ. 9346311129 ಸಂಪರ್ಕಿಸಲು ಕೋರಿದ್ದಾರೆ. ಮೊದಲು ಬಂದವರಿಗೆ ಆದ್ಯತೆ ಎಂದು ತಿಳಿಸಿದ್ದಾರೆ.

ಈ ಶಿಬಿರದಲ್ಲಿ ಭಗವದ್ಗೀತೆಯ ಆಧ್ಯಾತ್ಮಿಕ ಮೌಲ್ಯಗಳು, ಸಾಕ್ಷಾತ್ಕಾರ, ಭಾವ ಶುದ್ಧೀಕರಣ ಕ್ರಿಯೆ, ಮನೋ ದೈಹಿಕ ಸಮಸ್ಯೆಗಳಿಂದ ಮುಕ್ತಿ ಮತ್ತು ಯಶಸ್ಸನ್ನು ಪಡೆಯುವುದು ಹೇಗೆ, ರಾಜಯೋಗ ಅಭ್ಯಾಸ, ಧ್ಯಾನಯೋಗ ನೀಡಲಾಗುವುದು. ಜ್ಞಾನ ಪ್ರಾಪ್ತಿಗಾಗಿ ಶಿಬಿರಕ್ಕೆ ಆಸಕ್ತರು ಹಾಜರಾಗಿ. ಶಿಬಿರಕ್ಕೆ ನೊಂದಾಯಿಸಿಕೊಳ್ಳಲು ಮೊ. 9346311129 ಸಂಪರ್ಕಿಸಲು ಕೋರಿದ್ದಾರೆ. ಮೊದಲು ಬಂದವರಿಗೆ ಆದ್ಯತೆ ಎಂದು ತಿಳಿಸಿದ್ದಾರೆ.

# 'ಗುರುಗಳಿಗಿರುವ ಸ್ಥಾನ ಮೌಲ್ಯಯುತವಾಗಿರಲಿ'



ಮುಳಬಾಗಿಲು: ತಾಲ್ಲೂಕಿನ ತಾಯಲೂರು ಗ್ರಾಮದ ಪದವಿಪೂರ್ವ ಕಾಲೇಜು ಸರ್ಕಾರಿ ಪ್ರೌಢಶಾಲಾ ವಿಭಾಗದ 2003- 2004ನೇ ಸಾಲಿನ ಹತ್ತನೇ ತರಗತಿಯ ಹಳೆಯ ವಿದ್ಯಾರ್ಥಿಗಳಿಂದ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮ ನಡೆಯಿತು.

ಎಲ್ಲಾ ಹಿರಿಯ ವಿದ್ಯಾರ್ಥಿಗಳು ತಮಗೆ ಪಾಠ ಪ್ರವಚನ ಮಾಡಿದ ಗುರುಗಳನ್ನು ಸನ್ಮಾನಿಸಿ ಪಾದ ಪೂಜೆಗಳನ್ನು ಮಾಡಿ ಗೌರವಿಸಿದರು.

ಈ ವೇಳೆ ನಿವೃತ್ತ ಶಿಕ್ಷಕ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಗಡಿನಾಡು ಪ್ರತಿನಿಧಿ ತಾಯಲೂರು ಗೋಪಿನಾಥ್ ಮಾತನಾಡಿ, ಶಾಲೆ ಪ್ರಾರಂಭವಾಗಿ ಅರವತ್ತು ವರ್ಷಗಳು ಕಳೆದಿದೆ.

ಆದರೆ 2004ರ ಹತ್ತನೇ ತರಗತಿ ತಂಡದ ವಿದ್ಯಾರ್ಥಿಗಳು ಪ್ರಥಮ ಬಾರಿಗೆ ಗುರುವಂದನಾ ಕಾರ್ಯಕ್ರಮ ಮಾಡುತ್ತಿರುವುದು ಸಂತೋಷದ ವಿಷಯ.

ಈ ಪರಂಪರೆ ಹೀಗೆಯೇ ಮುಂದುವರೆಯಲಿ ಹಾಗೂ ಗುರುಗಳಿಗಿರುವ ಸ್ಥಾನ ಮೌಲ್ಯಯುತವಾಗಿರಲಿ ಎಂದು ಹೇಳಿದರು.

ಶಿಕ್ಷಕರಾದ ವೈ.ಮುನಿಯಪ್ಪ, ಚಲಪತಿ, ಮಂಜುನಾಥ್, ಅಪ್ಸರ್ ಅಹಮದ್, ಸಿಕಂದರ್ ಖಾನ್, ನಾಗರಾಜ್, ಗೋವಿಂದಪ್ಪ, ವರದರಾಜ, ಕವಿತ ವಿದ್ಯಾರ್ಥಿಗಳನ್ನು ಆಶೀರ್ವದಿಸಿ ಆಶೀರ್ವಚನ ನೀಡಿದರು.

ಹಿರಿಯ ವಿದ್ಯಾರ್ಥಿಗಳಾದ ಪುಷ್ಪ, ಅಶ್ವಿನಿ ಪಾರ್ವತಿ ಬಾಯಿ, ಸ್ವಾತಿ, ವೆಂಕಟೇಶಬಾಬು, ಚಂದ್ರಶೇಖರ್, ಸೋಮಶೇಖರ್, ನಾರಾಯಣ, ಲೋಕೇಶ್, ರತ್ನ ಕುಮಾರ್, ರಾಜು, ವಕೀಲ ಅರುಣ್ ರಮೇಶ್ ಮತ್ತಿತರರು ಇದ್ದರು.

ಇ-ಪೇಪರ್: www.munjaneevartheepaper.com

ಸ್ಥಳೀಯ

# ಕಾಮಗಾರಿಯನ್ನು ನಿಲ್ಲಿಸುವಂತೆ ತುಮಕೂರಿನಲ್ಲಿ ಮೇ.16 ರಂದು ನಡೆಯುವ ಪ್ರತಿಭಟನೆ

ಕೊರಟಗೆರೆ :- ತುಮಕೂರು ಜಿಲ್ಲೆಗೆ ಬರುತ್ತಿರುವ ಹೇಮಾವತಿ ನೀರಾವರಿ ಯೋಜನೆಯ ನೀರನ್ನು ಎಕ್ಸ್‌ಪೆಸ್ ಕೆನಾಲ್ ಮೂಲಕ ರಾಮನಗರ ಜಿಲ್ಲೆಗೆ ಹರಿಸುವ ಯೋಜನೆಯ ಕಾಮಗಾರಿಯನ್ನು ನಿಲ್ಲಿಸುವಂತೆ ತುಮಕೂರಿನಲ್ಲಿ ಮೇ.16 ರಂದು ನಡೆಯುವ ಪ್ರತಿಭಟನೆಗೆ ತಾಲೂಕಿನ ರೈತರೊಂದಿಗೆ ಜತೆಗೂಡಲಾಗುವುದು ಎಂದು ತಾಲೂಕು ಜಯಮಂಗಲಿ ಮತ್ತು ಸುವರ್ಣಮುಖಿ ಹಾಗೂ ಗರುಡಾಚಲ ಪಾತ್ರದ ರೈತರ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಜಿ.ವೆಂಕಟಾಚಲಯ್ಯ ತಿಳಿಸಿದರು.

ಅವರು ಪಟ್ಟಣದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲೂಕುಗಳು ತುಮಕೂರು ಜಿಲ್ಲೆಯ ಬರ ಪೀಡಿತ ತಾಲೂಕುಗಳಾಗಿದ್ದು ತುಮಕೂರಿಗೆ ಬರುವ ಹೇಮಾವತಿ ಕುಡಿಯುವ ನೀರು ಈ



ಭಾಗಗಳಿಗೆ ಸಮರ್ಪಕವಾಗಿ ಹರಿಯುತ್ತಿಲ್ಲ, ತುಮಕೂರಿಗೆ ಅವಶ್ಯಕತೆ ಮತ್ತು ಆದೇಶದ ಪ್ರಕಾರ ಹರಿಯಬೇಕಾದ ಹೇಮಾವತಿ ನೀರು ನಿಖರವಾಗಿ ಸಾಕಷ್ಟು ಬಾರದೆ ಇಡೀ ಜಿಲ್ಲೆ ನೀರಿನ ಕೊರತೆಯನ್ನು ಎದುರಿಸುತ್ತಿದೆ, ಇಂತಹ ಕಷ್ಟಕರ ಪರಿಸ್ಥಿತಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರ ಆದೇಶದಂತೆ ತುಮಕೂರಿಗೆ ಬರುವ ಹೇಮಾವತಿ ನೀರನ್ನು ಎಕ್ಸ್‌ಪ್ರೆಸ್ ಕೆನಾಲ್ ಮುಖಾಂತರ ರಾಮನಗರ ಜಿಲ್ಲೆಗೆ ಹರಿಸುವ ಉನ್ನಾರ ಮಾಡಿದ್ದು ಇದರಿಂದ ತುಮಕೂರಿನ ಜನತೆಗೆ ಅದರಲ್ಲೂ ಮಧುಗಿರಿ, ಕೊರಟಗೆರೆ ಹಾಗೂ ಪಾವಗಡ ಭಾಗದ ಜನತೆಗೆ ಮತ್ತು ರೈತರಿಗೆ ಸಂಕಷ್ಟ ಉಂಟಾಗಲಿದೆ, ಇದನ್ನು ತಡೆಯಲು ಜನಪ್ರತಿನಿಧಿಗಳಿಗೆ ರಾಜಕೀಯ ಇಚ್ಛಾಶಕ್ತಿ ಕೊರತೆ ಎದ್ದುಕಾಣುತ್ತಿದೆ, ನಮ್ಮ ಮುಂದಿನ ಹೋರಾಟ ಹೇಮಾವತಿ ಉಳಿಸುವುದು ಹಾಗೂ ಅದರ ನದಿ ನೀರನ್ನು ಕೊರಟಗೆರೆ ತಾಲೂಕಿನ ಜಯಮಂಗಲಿ, ಸುವರ್ಣಮುಖಿ ಹಾಗೂ ಗರುಡಾಚಲ ನದಿ ಪಾತ್ರಗಳಿಗೆ ಹರಿಸುವುದಾಗಿದ್ದು ಕೋಡಲೆ ಸರ್ಕಾರ ಎಚ್ಚತ್ತುಕೊಳ್ಳಬೇಕಾಗಿದೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಅನಿ□□ಕುಮಾರ್ ಮಾತನಾಡಿ ಕೊರಟಗೆರೆ ತಾಲೂಕಿಗೆ ಹೇಮಾವತಿ ನೀರು ಸರಿಯಾಗಿ ಹರಿಯುತ್ತಿಲ್ಲಾ ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಕೊರತೆಯ ಕಾರಣವಾಗಿದೆ, ನಾನು ಅಧಿಕಾರಿಯಾಗಿದ್ದಾಗ ಹೇಮಾವತಿ ನೀರನ್ನು ಇಲ್ಲಿಯ ಕೆರೆಗಳಿಗೆ ಚಾನಲ್ ಮುಖಾಂತರ ಹರಿಸುವ ಯೋಜನೆಯನ್ನು ರೋಪಿಸಿದ್ದವು ಕೊರಟಗೆರೆ ಸೇರಿದಂತೆ ಮಧುಗಿರಿ ಪಾವಗಡಗಳಿಗೆ ಹೇಮಾವತಿ ನದಿ ನೀರು ಹರಿಸಲು ಹೋರಾಟ ಮಾಡುತ್ತೇವೆ, ಕೊರಟಗೆರೆ ತಾಲೂಕಿನಲ್ಲಿ ಬೈರಗೊಂಡ್ಲು ಬಫರ್ ಡ್ಯಾಂ ನಿರ್ಮಾಣ ವಾಗಬೇಕಿದೆ, ಅದನ್ನು ತಪ್ಪಿಸಿದರೆ ಸಾವರಿರಾರು ಎಕರೆ ಭೂಮಿ ನೀರಾವರಿ ಪ್ರದೇಶವಾಗುವುದನ್ನು ತಪ್ಪಿಸಿದಂತ್ತಾಗುತ್ತದೆ, ರೈತರಿಗೆ ಸರ್ಕಾರವು ಸರಿಯಾದ ಬೆಲೆಯನ್ನು ಅವರ ಜಮೀನಿಗೆ ನೀಡಿ ಬಫರ್ ಡ್ಯಾಂ ನಿರ್ಮಿಸಬೇಕು ಹಾಗೂ ಹೇಮಾವತಿ ನೀರನ್ನು ರಾಮನಗರಕ್ಕೆ ಕೊಂಡೋಯ್ಯದಂತೆ ಹೋರಾಟ ಮಾಡಲಾಗುವುದು ಬೇಕಾದರೆ ಡಿ.ಕೆ.ಶಿವಕುಮಾರ್ ಮೇಕೆದಾಟು ಯೋಜನೆ ಮಾಡಿ ಆಪ್ರದೇಶಗಳಿಗೆ ನೀರು ಹರಿಸಿಕೊಳ್ಳಲ್ಲಿ ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ಸಮಿತಿಯ ಲೊಕೇ□□ಕುಮಾರ್, ಬಿಜೆಪಿ ತಾಲೂಕು ಅಧ್ಯಕ್ಷ ಡಾ.ದರ್ಶನ್, ಪ್ರಧಾನ ಕಾರ್ಯದರ್ಶಿ ರಂಗರಾಜು , ನಾಗರಾಜು ಮುಖಂಡರುಗಳಾದ ಸೀಬಿರಂಗಮ್ಮ, , ಸಂಜೀವರೆಡ್ಡಿ, ಡಾ.ರಾಮಚಂದ್ರ, ರವಿಕುಮಾರ್, ದೇವರಾಜು, ದಯಾನಂದ, ಚೇತನ್, ಸುರೇಶ್ , ಸಿದ್ದಲಿಂಗಯ್ಯ , ಸೇರಿದಂತ ಇನ್ನಿತರರು ಹಾಜರಿದ್ದರು.

# ಜನರ ಏಳಿಗೆಗೆ ಶ್ರಮಿಸುವಂತಹ ಶಕ್ತಿ ಭಗವಂತ ನೀಡಲಿ

ಕೊರಟಗೆರೆ:– ಕೋಡಿ ತಿಮ್ಮನಹಳ್ಳಿ ನಿವೃತ್ತ ಮುಖ್ಯ ಶಿಕ್ಷಕರು, ಅಧ್ಯಕ್ಷರು ಮಧುಗಿರಿ ಶೈಕ್ಷಣಿಕ ಜಿಲ್ಲೆ ಹಾಗೂ ಎಫೆಕ್ಟ್ ಬ್ಯಾಂಕ್ ನಿರ್ದೇಶಕರಾದ ಪುಟ್ಟರಾಜು ಸತತ ಹತ್ತಾರು ವರ್ಷಗಳಿಂದ ಸಾಮಾಜಿಕ ಸೇವೆ ಮಾಡಿಕೊಂಡು ನಿರ್ಗತಿಕ ಅನಾಥ ಅಸಕ್ತ ಜನರ ಆಶಾಕಿರಣವಾದ ಪುಟ್ಟರಾಜು ನೂರಾರು ವರ್ಷ ಬದುಕಿ ಬಾಳಿ ಇನ್ನಷ್ಟು ತುಳಿತಕ್ಕೊಳಗಾದ ಜನರ ಏಳಿಗೆಗೆ ಶ್ರಮಿಸುವಂತಹ ಶಕ್ತಿ ಭಗವಂತ ನೀಡಲಿ ಎಂದು ನೂರಾರು ಜನ ಅಭಿಮಾನಿಗಳು ಪ್ರಸಿದ್ಧ ಪುಣ್ಯಕ್ಷೇತ್ರ ಕ್ಯಾಮೇನಹಳ್ಳಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿ ದೇವರಲ್ಲಿ ಆಶೀರ್ವಾದ ಬೇಡಿದರು.



ತೋವಿನಕೆರೆ ಭಾಗದ ಹಿರಿಯ ಕಾಂಗ್ರೆಸ್ ಪಕ್ಷದ ಮುತ್ಸದಿ ರಾಜಕಾರಣಿ ದೀನ ದಲಿತರ ತುಳಿತಕ್ಕೊಳಗಾದ ಜನರ ಆಶಾಕಿರಣವಾದ ಕೋಡಿತಿಮ್ಮನಹಳ್ಳಿ ಪುಟ್ಟರಾಜು ರವರ 66ನೇ ವರ್ಷದ ಹುಟ್ಟು ಹಬ್ಬದ ಪ್ರಯುಕ್ತ ಅವರ ಅಭಿಮಾನಿ ಬಳಗ ಹಾಗೂ ಅವರ ನೆಚ್ಚಿನ ಅಭಿಮಾನಿಗಳು ಪ್ರಸಿದ್ಧ ಪುಣ್ಯ ಕ್ಷೇತ್ರ ಕ್ಯಾಮೇನಹಳ್ಳಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಪೂಜ್ಯ ಸಲ್ಲಿಸಿ ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಸಕ್ತ ಜನರ ಕೈಹಿಡಿದಿರುವ ಪುಟ್ಟರಾಜು ಇನ್ನು ಎತ್ತರ ಸ್ಥಾನಕ್ಕೆ ಬೆಳೆಯಲಿ, ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ ಪರಮೇಶ್ವರ್ ಪುಟ್ಟರಾಜುಗೆ ಒಂದು ನಿಗಮ ಮಂಡಳಿ ನೀಡಲಿ ಕಲ್ಪಿಸಲಿ ಅವರು ಸಾರ್ವಜನಿಕ ವಲಯದಲ್ಲಿ ಸಹಾಯ ಹಸ್ತ ನೀಡುವ ಮನಸ್ಥಿತಿ ಇರುವವರು ಎಂದು ಹಲವು ಭಕ್ತರು ಪತ್ರಿಕೆಯ ಮುಂದೆ ಮನವಿ ಮಾಡಿಕೊಂಡರು.

ಪುಟ್ಟರಾಜು ಅವರ 66ನೇ ಹುಟ್ಟುಹಬ್ಬಕ್ಕೆ ನೂರಾರು ಜನ ಶುಭಕೋರಿರುವುದಲ್ಲದೆ ಅವರ ತೋಟದ ಮನೆಗೆ ಭೇಟಿ ನೀಡಿ ಶುಭ ಹಾರೈಸಿದ್ದಾರೆ.

ಸಾಮಾಜಿಕ ಹಾಗೂ ಶೈಕ್ಷಣಿಕ ರಂಗದಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಪುಟ್ಟರಾಜು ಅವರಿಗೆ ಭಗವಂತ ಆಯುರ್ ಆರೋಗ್ಯ ಭಾಗ್ಯ ಕೊಟ್ಟು ಕರುಣಿಸುವುದಲ್ಲದೆ ರಾಜಕಾರಣದಲ್ಲಿ ಸಾಮಾಜಿಕವಾಗಿ ತುಳಿತಕ್ಕೊಳಗಾದ ಜನರ ಆಶ್ರಯಕ್ಕೆ ನಿಲ್ಲುವುದು ಕಡಿಮೆ ಇಂತಹ ಮನಸ್ಥಿತಿ ಹೊಂದಿರುವ ಕೋಡಿ ತಿಮ್ಮನಹಳ್ಳಿ ಪುಟ್ಟರಾಜು ಅವರಿಗೆ ರಾಜ್ಯ ಸರ್ಕಾರ ಕಾಂಗ್ರೆಸ್ ಇರುವುದರಿಂದ ಕಳೆದ ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಶ್ರಮವಹಿಸಿ ದುಡಿದಿರುವುದರಿಂದ ಇವರ ರಾಜಕೀಯ ಭವಿಷ್ಯದಲ್ಲೂ ಹೆಚ್ಚಿನ ಸ್ಥಾನಮಾನ ನೀಡಲಿ ಜೊತೆಗೆ ಸಾರ್ವಜನಿಕರಿಗೆ ಸಹಾಯ ಹಸ್ತ ನೀಡುವಂತಹ ಕೋಡಿ ತಿಮ್ಮನಹಳ್ಳಿ ಪುಟ್ಟರಾಜುಗೆ ಸರ್ಕಾರದ ಮಟ್ಟದಲ್ಲಿ ನಿಗಮ ಮಂಡಳಿ ಅವಕಾಶ ಕಲ್ಪಿಸಿ ಕೊಡಲಿ ಎಂದು ಹಲವು ನೆಚ್ಚಿನ ನಾಯಕರು ಹಾಗೂ ಅಭಿಮಾನಿ ಬಳಗ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಗೃಹ ಸಚಿವ ಪರಮೇಶ್ವರ್ ಗೆ ವಿನಮ್ರತಿಯಿಂದ ಮನವಿ ಮಾಡಿಕೊಳ್ಳುತ್ತಿದ್ದಾರೆ.



# 'ನೆಕ್ಸ್ಟ್ ಜೆನ್ ಇಂಡಿಗೊ' ಆರಂಭ

ಬೆಂಗಳೂರು: ಬೆಂಗಳೂರಿನ ಹೋಟೆಲ್ ಲಲಿತ್ ನಲ್ಲಿ ನಡೆದ ಬೆಂಗಳೂರು ಡೆನಿಮ್ ಅಂಡ್ ಜೀನ್ಸ್ ಎಕ್ಸೊ ಕಾರ್ಯಕ್ರಮದಲ್ಲಿ ಎಎಂಎ ಹರ್ಬಲ್ ಗ್ರೂಪ್ ಹೆಮ್ಮೆಯಿಂದ ತನ್ನ ಮಹತ್ತರ ತಂತ್ರ ಅನಾವರಣಗೊಳಿಸಿದ್ದು ಅದರಲ್ಲಿ ಬಯೊ ಇಂಡಿಗೊ ಪಿ.ಆರ್.ಇ.ಆರ್. ಅಭಿವೃದ್ಧಿಪಡಿಸಲಾಗಿದ್ದು ಇದನ್ನು 'ನೆಕ್ಸ್ಟ್ ಜೆನ್ ಇಂಡಿಗೊ' ಎಂದು ಗುರುತಿಸಲಾಗಿದೆ. ವಿಶ್ವದ ಮೊದಲ ಜೈವಿಕ ರಾಸಾಯನಿಕಾಗಿ ಪರಿವರ್ತಿಸಲ್ಪಟ್ಟ ಪ್ರಿ–ರೆಡ್ಯೂಸ್ಡ್ ನೈಸರ್ಗಿಕ ಇಂಡಿಗೊ ದ್ರವ ರೂಪದಲ್ಲಿ ದೊರೆಯುತ್ತಿದ್ದು ವಸ್ತ್ರ ಉದ್ಯಮವನ್ನು ಕ್ರಾಂತಿಕಾರಕಗೊಳಿಸಲಿದೆ.




ಎಎಂಎ ಹರ್ಬಲ್ ಗ್ರೂಪ್ ಸಹ–ಸಂಸ್ಥಾಪಕ ಮತ್ತು ಸಿಇಒ ಶ್ರೀ ಯವರ್ ಅಲಿ ಶಾ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಈ ಆವಿಷ್ಕಾರಕ ತಂತ್ರವು ಸುಸ್ಥಿರತೆ ಮತ್ತು ವೆಚ್ಚ ಉಳಿಸುವಲ್ಲಿ ಗಮನಾರ್ಹ ಹೆಜ್ಜೆ ಇರಿಸಿದೆ. ಸಾಂಪ್ರದಾಯಿಕ ಪೌಡರ್ ಡೈ ಅನುಕೂಲಗಳನ್ನು ಮೀರಿರುವ ಬಯೊ ಇಂಡಿಗೊ ಪಿ.ಆರ್.ಇ.ಆರ್. ಪರಿಸರದ ಅರಿವು ಮತ್ತು ಉನ್ನತ ಗುಣಮಟ್ಟದ ದಾರಿದೀಪವಾಗಿದೆ. ಬಯೊ ಇಂಡಿಗೊ ಪಾರಿಸರಿಕ ಸ್ನೇಹ ಮತ್ತು ವೆಚ್ಚದ ದಕ್ಷತೆ ನೀಡುವುದು ಮಾತ್ರವಲ್ಲದೆ ಸರಿಸಾಟಿ ಇರದ ಬಣ್ಣದ ಶ್ರೇಷ್ಠತೆ ನೀಡುತ್ತದೆ. ವಿದ್ಯುಚ್ಛಕ್ತಿ ಉಳಿಸುವ ಪ್ರಕ್ರಿಯೆಗಳು ಮತ್ತು ಕನಿಷ್ಠ ತ್ಯಾಜ್ಯ ಉತ್ಪಾದನೆ ಮಾಡುವ ಈ ತಂತ್ರಜ್ಞಾನವು ಹಸಿರು ವಸ್ತ್ರದ ರೂಢಿಗಳತ್ತ ಮಹತ್ತರ ಬದಲಾವಣೆ ತೋರುತ್ತದೆ.

## ಸಾಗರ ತಾಲೂಕಿನ ಸರ್ಕಾರಿ ಶಾಲೆಯ ಆರಂಭಕ್ಕೆ ಸಕಲ ಸಿದ್ದತೆ.

ನಮ್ಮ ಪತ್ರಕೆಯ ಜೊತೆಗೆ ಸಾಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಇ. ಪರಶುರಾಮ ರವರು ಮಾತನಾಡಿದರು.

ಸಾಗರ ತಾಲೂಕಿನ ಎಲ್ಲಾ ಶಾಲೆಗಳು ಮೇ.29 ರಿಂದ ಶಾಲೆ ಪ್ರಾರಂಭಿಸಿಲಾಗುವುದು..ಅದೆ ದಿನದಿಂದ ಶಾಲಾ ಮಕ್ಕಳಿಗೆ ಸಮವಸ್ತ್ರ .ಪುಸ್ತಕಗಳನ್ನು ವಿತರಿಸುವ ಕೆಲಸವನ್ನು ಮಾಡಲಿದ್ದು ಇಗಾಗಲೆ ಸರ್ಕಾರದಿಂದ ಶೇಕಡಾ65% ಪುಸ್ತಕ ಹಾಗೂ ಸಮವಸ್ತ್ರ ನಮ್ಮಲ್ಲಿ ಲಭ್ಯವಿದ್ದು ಮುಂದಿನ ದಿನಗಳಲ್ಲಿ ಪೂರ್ಣ ಪ್ರಮಾಣದ ಸಮವಸ್ತ್ರ ಪುಸ್ತಕ ಬರಲಿದೆ.ತಾಲೂಕಿನ ಎಲ್ಲಾ ಶಾಲೆಗಳಿಗೂ ತಲುಪಿಸುವ ಕೆಲಸವನ್ನು ಶಿಕ್ಷಣ ಇಲಾಖೆ ಮಾಡುತ್ತಿದೆ.ಹಾಗೆಯೆ ಶಾಲೆಯಲ್ಲಿ ಬಣ್ಣ ಹಾಗೂ ಕಟ್ಟಡದ ಕೆಲಸವನ್ನು ಇಗಾಗಲೆ ಮುಗಿಸಿದ್ದು .ಎಲ್ಲಾ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಮೂಲಕ ತಮ್ಮ ಮಕ್ಕಳ ಉಜ್ವಲ ಭವಿಷ್ಯವನ್ನು ರೂಪಿಸುವ ಕೆಲಸ ಮಾಡಬೇಕು ಎಂದರು.

ಎಸ್.ಎಸ್.ಎಲ್.ಸಿ.ಯಲ್ಲಿ ಕಳೆದ ಸಾಲಿಗಿಂತ ಅತೀ ಹೆಚ್ಚು ವಿದ್ಯಾರ್ಥಿಗಳು ನಮ್ಮ ಸರ್ಕಾರಿ ಶಾಲೆಯಲ್ಲಿ ಪಾಸಾಗಿದ್ದು ನಮ್ಮ ಇಲಾಖೆ ಅದೆ ರೀತಿಯಲ್ಲಿ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಮಹತ್ತರ ಶಿಕ್ಷಣವನ್ನು ನೀಡಲಿದೆ ಎಂದರು ......

ವರದಿ .ರಾಘವೇಂದ್ರ ತಾಳಗುಪ್ಪ



# ನಟಿ ಸನ್ನಿ ಲಿಯೋನ್ ಹುಟ್ಟು ಹಬ್ಬವನ್ನು ಅದ್ದೂರಿಯಾಗಿ ಆಚರಿಸಿದ ಕಾರ್ಕಳ್ಳಿ ಗ್ರಾಮದ ಯುವಕರು

ಪಡ್ಡೆ ಹುಡುಗರ ಹಾಟ್ ಫೇವರೇಟ್ ನೀಲಿ ಚಿತ್ರನಟಿ ಸನ್ನಿ ಲಿಯೋನ್ ರವರ ಹುಟ್ಟು ಹಬ್ಬವನ್ನು ಕೆ.ಎಂ ದೊಡ್ಡಿ ಸಮೀಪದ ಕಾರ್ಕಳ್ಳಿ ಗ್ರಾಮದ ಯುವಕರು ಅದ್ದೂರಿಯಾಗಿ ಸಂಭ್ರದಿಂದ ಆಚರಣೆ ಮಾಡಿ ಗಮನ ಸೆಳೆದಿದ್ದಾರೆ.



ಕೆ.ಎಂ ದೊಡ್ಡಿ ಸಮೀಪದ ಕಾರ್ಕಳ್ಳಿ ಗ್ರಾಮದ ಸನ್ನಿ ಲಿಯೋನ್ ಬಾಯ್ಸ್ ಯುವಕರು ಒಟ್ಟಾಗಿ ಸೇರಿ ನೀಲಿ ಚಿತ್ರತಾರೆ ಸನ್ನಿ ಲಿಯೋನ್ ರ ಬೃಹತ್ ಗಾತ್ರದ ಕಟೌಟ್ ನಿರ್ಮಿಸಿ ಅದರ ಮುಂಭಾಗ ಸನ್ನಿ ಲಿಯೋನ್ ಭಾವಚಿತ್ರವಿರುವ ಕೇಕ್ ಕತ್ತರಿಸಿ ಪರಸ್ಪರ ಶುಭಕೋರಿ ಯುವಕರೆಲ್ಲಾರು ಪರಸ್ಪರ ಕೇಕ್ ತಿನ್ನಿಸಿ ಸಂಭ್ರಮಿಸಿದ್ರು .

ಗ್ರಾಮದ ಸನ್ನಿ ಬಾಯ್ಸ್ ಯುವಕರು ನಟಿ ಸನ್ನಿ ಲಿಯೋನ್ ನಟನೆಯ ಜೊತೆಗೆ ನೂರಾರು ಅನಾಥ ಮಕ್ಕಳಿಗೆ ತಾಯಿಯಾಗಿದ್ದಾರೆ.ಅವರ ಸಮಾಜಮುಖಿ ಕೆಲಸ ಕಂಡು ನಾವು ಅವರ ಅಭಿಮಾನಿಯಾಗಿದ್ದೇವೆ.ಕೆಲವರು ಅವರ ನೀಲಿ ಚಿತ್ರಗಳ ತಾರೆ ಎಂದು ಅವರನ್ನು ಹಿಯಾಳುಸುತ್ತಾರೆ.

ಅದರೆ ನಾವು ಸನ್ನಿ ಲಿಯೋನ್ ರವರ ಒಳ್ಳೆಯ ಗುಣ ಅವರ ಮಾತೃ ಹೃದಯಿ ಸೇವಾ ಮನೋಭಾವದ ಕಾರ್ಯಕ್ಕೆ ಅಭಿಮಾನಿಯಾಗಿದ್ದೇವೆ ಎಂದು ತಿಳಿಸಿದರು.

ಕಾರ್ಕಳ್ಳಿ ಗ್ರಾಮದ ಯುವಕರ ಸನ್ನಿ ಲಿಯೋನ್ ಹುಟ್ಟು ಹಬ್ಬದ ಆಚರಣೆ ವಿಚಾರ ತಿಳಿದು ಅಕ್ಕ ಪಕ್ಕದ ಗ್ರಾಮಸ್ಥರು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಸನ್ನಿ ಬಾಯ್ಸ್ ಯುವಕರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೆ.ಎಂ ದೊಡ್ಡಿ :–

# ಗೀತಾ ಸುರೇಶ್ ಅವರಿಗೆ 50 ರ ಹುಟ್ಟು ಹಬ್ಬದ ಸಂಭ್ರಮ..

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ನಂದಿನಿ ಲೇಔಟ್ ವಾರ್ಡ್ ನ ಮಹಿಳಾ ಮೋರ್ಚಾ ಉಪಾಧ್ಯಕ್ಷರು ಹಾಗೂ ಸಮಾಜ ಸೇವಕಿ ಗೀತಾ ಸುರೇಶ್ ಅವರ 50 ವರ್ಷದ ಹುಟ್ಟು ಹಬ್ಬವನ್ನು ಅವರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಹುಟ್ಟು ಹಬ್ಬದ ಸಮಾರಂಭಕ್ಕೆ ಬಿಗ್ ಬಾಸ್ ಕನ್ನಡ ರಿಯಾಲಿಟಿ ಶೋ ಸ್ಪರ್ಧಿ ವರ್ತೂರ್ ಸಂತೋಷ್ ಬಿಬಿಎಂಪಿ ಮಾಜಿ ಉಪ ಮಹಾಪೌರರಾದ ಹೇಮಲತಾ ಗೋಪಾಲಯ್ಯ ರವರು ಬಿಬಿಎಂಪಿ ಮಾಜಿ ಸದಸ್ಯರಾದ ಕೆ ವಿ ರಾಜೇಂದ್ರ ಕುಮಾರ್, ಉತ್ತರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಎನ್ ಜಯರಾಂ, ಬಿಜೆಪಿ ಮಂಡಲ ಅಧ್ಯಕ್ಷರಾದ ರಾಘವೇಂದ್ರ ಶೆಟ್ಟಿ ,ಮಹಿಳಾ ಅಧ್ಯಕ್ಷೆ ನಾಗರತ್ನ ಲೋಕೇಶ್ ಪದ್ಮಾವತಿ ಶ್ರೀನಿವಾಸ್ ಹ್ಯೂಮನ್ ರೈಟ್ಸ್ ಅಧ್ಯಕ್ಷ ಚಿಕ್ಕಣ್ಣ ಸೇರಿದಂತೆ ಹಲವಾರು ಗಣ್ಯರು,ಅಭಿಮಾನಿಗಳು ಆಗಮಿಸಿ ಶಾಲು



ಹೊದಿಸಿ ಫಲಪುಷ್ಪ ನೀಡಿ ಸನ್ಮಾನಿಸಿ ಗೌರವಿಸಿ ಹುಟ್ಟು ಹಬ್ಬದ ಶುಭಾಶಯ ಕೋರಿದರು. ಇದೇ ಸಂದರ್ಭದಲ್ಲಿ ಗೀತಾ ಸುರೇಶ್ ಅವರು ಹುಟ್ಟು ಹಬ್ಬದ ಸವಿ ನೆನಪಿಗಾಗಿ ಕನ್ನಡ ಶಾಲೆಯ ಮಕ್ಕಳಿಗೆ ನೋಟ್ ಬುಕ್, ಕನ್ನಡ ಅಂಕಲಿಪಿ ಪಠ್ಯ ಪುಸ್ತಕಗಳನ್ನು ನೀಡಿ ಹುಟ್ಟು ಹಬ್ಬವನ್ನು ಸಾರ್ಥಕ ಗೊಳಿಸಿಕೊಂಡರು. ಇದೇ ಸಂದರ್ಭದಲ್ಲಿ ಮಾತನಾಡಿದ ರಾಘವೇಂದ್ರ ಶೆಟ್ಟಿ ಅವರು ಗೀತಾ ಸುರೇಶ್ ಗಟ್ಟಿ ಮಹಿಳೆ, ಹಲವು ಮಾನವೀಯ ಕಳಕಳಿಯುಳ್ಳ ಕೆಲಸ ಮಾಡಿ ಈ ಭಾಗದಲ್ಲಿ ಹೆಸರು ಮಾಡಿದ್ದಾರೆ. ನಮ್ಮ ಬಿಜೆಪಿ ಪಕ್ಷದ ಮಹಿಳಾ ಮುಖಂಡರಾಗಿ ಪಕ್ಷ ಸಂಘಟನೆ ಸೇರಿದಂತೆ ಹಲವು ಪಕ್ಷದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸರ್ಕಾರದಿಂದ ಸಿಗುವ ಮೂಲಭೂತ ಸೌಲಭ್ಯಗಳನ್ನು ದೀನ ದಲಿತರಿಗೆ, ಆರ್ಥಿಕವಾಗಿ ಹಿಂದುಳಿದ ದುರ್ಬಲರಿಗೆ ಸಹಾಯ ಮಾಡುತ್ತಾ ನೊಂದವರ ಧ್ವನಿಯಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಕಾರ್ಯ ಹೀಗೆ ಮುಂದುವರೆಯಲಿ ಒಳ್ಳೆಯ ಸ್ಥಾನಮಾನ ಅರಸಿ ಬರಲಿ ಎಂದು ಹರಸಿದರು. ಕುಟುಂಬದ ಸದಸ್ಯರು ಮತ್ತು ಕ್ಷೇತ್ರದ ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳ ಮುಖಂಡರು ಕಾರ್ಯಕರ್ತರು ಬಂದು ಗೀತಾ ಅವರಿಗೆ ಹುಟ್ಟು ಹಬ್ಬದ ಶುಭಾಶಯ ಕೋರಿದರು.

ಸಮಾರಂಭದಲ್ಲಿ ಬಿಗ್ ಬಾಸ್ ಶೋ ಸ್ಪರ್ಧಿ ವರ್ತೂರ್ ಸಂತೋಷ್ ಭಾಗವಹಿಸಿ ಶುಭಕೋರಿದ್ದು ವಿಶೇಷ ವಾಗಿತ್ತು .

# ಖಾಸಗಿ ವ್ಯಕ್ತಿಗೆ 78,000 ದಂಡ

ಕೊರಟಗೆರೆ :– ಸಾರ್ವಜನಿಕರಿಗೆ ಕುಡಿಯುವ ನೀರಿಗೆ ಅಹಾಕಾರವಿದ್ದರೂ ಖಾಸಗಿ ವ್ಯಕ್ತಿ ತೋಟಕ್ಕೆ ಅಕ್ರಮವಾಗಿ ಗ್ರಾಮ ಪಂಚಾಯಿತಿ ಪೈಪ್ಲೈನ್ ನಿಂದ ನಿರಾಯಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಜಾನೆ ವಾರ್ತೆ ಸುದ್ದಿ ಬಿತ್ತರವಾದ ತಕ್ಷಣ ಅಧಿಕಾರಿಗಳು ಎಚ್ಚೆತ್ತುಕೊಂಡು ಅಕ್ರಮ ನೀರು ಪಡೆದ ಖಾಸಗಿ ವ್ಯಕ್ತಿಗೆ 78,000 ದಂಡ ವಿಧಿಸುವ ಮೂಲಕ ಪ್ರಕರಣ ಸುಖಾಂತ್ಯ ಕಂಡಿದ್ದು ಮುಂಜಾನೆ ವಾರ್ತೆ ಸುದ್ದಿಗೆ ಫಲಶ್ರುತಿ ದೊರಕಿದೆ.

ಕೊರಟಗೆರೆ ತಾಲೂಕಿನ ಕಸಬಾ ಹೋಬಳಿ ಹಂಚಿಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ದೊಡ್ಡ ಮುನಿಯಪ್ಪನ ಮಗ ಮರಿಯಪ್ಪ ಅಕ್ರಮವಾಗಿ ತಮ್ಮ ತೋಟಕ್ಕೆ ಗ್ರಾಮ ಪಂಚಾಯತಿ ಪೈಪ್ ಲೈನ್ ನಿಂದ ನೀರು ಬಳಸಿಕೊಳ್ಳುತ್ತಿದ್ದದ್ದು ಬೆಳಕಿಗೆ ಬಂದು




ಪೊಲೀಸ್ ಮೆಟಿಲೇರಿದ ನಂತರ ಗ್ರಾಮ ಪಂಚಾಯಿತಿ ಪಿಡಿಒ ರಮೇಶ್ ಶಿಸ್ತು ಕ್ರಮ ಕೈಗೊಂಡು ಮಾಲೀಕನಿಗೆ 78,000 ದಂಡ ವಿಧಿಸುವ ಮೂಲಕ ಅಕ್ರಮ ಸಂಪರ್ಕಕ್ಕೆ ಕಡಿವಾಣ ಹಾಕಿದ್ದಾರೆ.

ಬರಗಾಲದಿಂದ ಅಂತರ್ಜಲ ಮಟ್ಟ ಕುಸಿದು ಹಲವು ಕೊಳವೆ ಬಾವಿಗಳಲ್ಲಿ ನೀರು ಬತ್ತಿ ಹೋಗಿ ಅಲ್ಪಸ್ವಲ್ಪ ಬರುತ್ತಿದ್ದ ನೀರಿಗೆ ಸಾರ್ವಜನಿಕರಿಗೆ ಬಳಕೆಯಾಗಬೇಕಾದ ನೀರು ಬೆಂಗಳೂರಿನ ಖಾಸಗಿ ವ್ಯಕ್ತಿಯ ತೋಟದಲ್ಲಿ ಬಳಕೆಯಾಗುತ್ತಿದ್ದು ಕೆಲವು ಸಾರ್ವಜನಿಕರ ಆರೋಪದ ಮೇಲೆಗೆ ಸ್ಥಳ ಪರಿಶೀಲನೆ ನಡೆಸಿದ ಪಿಡಿಒ ಅಧ್ಯಕ್ಷರು ಸೇರಿದಂತೆ ಅಧಿಕಾರಿ ವರ್ಗ ಅಕ್ರಮ ನೀರಿನ ಸಂಪರ್ಕವನ್ನು ಪತ್ತೆ ಹಚ್ಚಿ ಅವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿದ ನಂತರ ಖಾಸಗಿ ಭೂಮಾಲಿಕ ಅಕ್ರಮ ನೀರು ಬಳಕೆಗೆ 78,000 ದಂಡ ವಿಧಿಸಿ ಕಾನೂನು ಕ್ರಮ ಜರುಗಿಸಿದ್ದಾರೆ ಎನ್ನಲಾಗಿದೆ.

ಗ್ರಾಮ ಪಂಚಾಯತಿಯ ನೀರು ಖಾಸಗಿ ವ್ಯಕ್ತಿಯ ತೋಟಕ್ಕೆ ಎಂಬ ಶೀರ್ಷಿಕೆಡಿ ಮುಂಜಾನೆ ವಾರ್ತೆ ಸುದ್ದಿಗೆ ಜಿಲ್ಲಾ ಮಟ್ಟ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಪಿಡಿಒ ಹಾಗೂ ಅಧ್ಯಕ್ಷರು ಸ್ಪಂದಿಸಿ ಅಕ್ರಮ ನೀರಿನ ಸಂಪರ್ಕ ಪಡೆದಿದ್ದ ಖಾಸಗಿ ವ್ಯಕ್ತಿಗೆ 78,000 ದೊಡ್ಡ ಮಟ್ಟದ ಹಣವನ್ನು ಗ್ರಾಮ ಪಂಚಾಯಿತಿಗೆ ಸಂದಾಯ ಮಾಡಿಸಿಕೊಳ್ಳುವುದರ ಮೂಲಕ ಶಿಸ್ತು ಕ್ರಮ ಜರುಗಿಸಿದ್ದಾರೆ.

# ನನ್ನ ನಡೆ ಪಕ್ಷದ ವಿರುದ್ಧ ಅಲ್ಲಾ ಪಕ್ಷಾಂತರಿಯ ವಿರುದ್ಧ

ಇಂದು ಪತ್ರಿಕೆಯ ಜೊತೆ ಮಾತಾನಾಡಿದ ಪದವಿದರರ ಕ್ಷೇತ್ರದ ಪಕ್ಷೇತರರ ಅಭ್ಯರ್ಥಿ ಎಸ್.ಪಿ.ದಿನೇಶ್ ಅವರು ಕಳೆದ 33 ವರ್ಷಗಳಿಂದ ನಾನು ಕಾಂಗ್ರೆಸ್ ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ನನಗೆ ನೀಡಿದ ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸಿದ್ದು ಕಳೆದ ಹತ್ತು ತಿಂಗಳ ಹಿಂದೆ ಕೆ.ಪಿ.ಸಿ.ಸಿ.ಅದ್ಯಕ್ಷರು




ನನಗೆ ಬರವಸೆ ನೀಡಿದ ಬಳಿಕವಷ್ಟೆ ನಾನು ಕಳೆದ ಹತ್ತು ತಿಂಗಳಿಂದ ನನ್ನ ಇಡೀ ಕ್ಷೇತ್ರದಲ್ಲಿ ಪ್ರಚಾರ ಮಾಡ್ತಾ ಬಂದಿದ್ದು ನನಗೆ ಪಕ್ಷದ ಶಾಸಕರು .ಎಲ್ಲಾ ಚುನಾಯಿತ ಪ್ರತಿನಿಧಿಗಳು ಸಹಕಾರ ನೀಡಿದ್ದಾರೆ.ನೀಡುತ್ತಾ ಇದ್ದಾರೆ ಆದರೆ ಪಕ್ಷದಿಂದ ಪಕ್ಷಕ್ಕೆ ಹಾರಿ ನಮ್ಮ ಪಕ್ಷದ ವಿರುದ್ಧ ಮಾತನಾಡುತ್ತಾ ಇದ್ದ ಪಕ್ಷಾಂತರಿಗೆ ಇಂದು ಟಿಕೇಟ್ ಕೊಟ್ಟಿದ್ದು ನನಗೆ ಅಸಮಾಧಾನ ಇದೆ ಆ ಉದ್ದೇಶದಿಂದ ನಾ ಪಕ್ಷೇತರವಾಗಿ ನಿಲ್ಲುವ ಉದ್ದೇಶ ಹೊಂದಿದ್ದೆನೆ.ಪಕ್ಷವು ಅಭ್ಯರ್ಥಿ ಬದಲಾವಣೆ ಮಾಡಿದರೆ ನಾ ನನ್ನ ನಾಮಪತ್ರ ವಾಪಸ್ಸು ಪಡೆಯುವೆ ಇಲ್ಲ ಯಾವುದೇ ಕಾರಣಕ್ಕು ಮುಂದೆ ಇಟ್ಟ ಹೆಜ್ಜೆ ಹಿಂದೆ ತೆಗೆಯೋ ಮಾತು ಇಲ್ಲ ಒಂದು ವೇಳೆ ಪಕ್ಷ ಅಭ್ಯರ್ಥಿ ಬದಲಾವಣೆ ಮಾಡದೆ ಇದ್ದಲ್ಲಿ ನಾನು ನಾಡಿದ್ದು ಪಕ್ಷಕ್ಕೆ ರಾಜಿನಾಮೆ ನೀಡುತ್ತೇನೆ.

ಕಳೆದ ಸಲ ಗೆದ್ದ ಇವರು ಯಾವ ಶಾಲೆಗೆ ಯಾವ ಯಾವ ಕೆಲಸಕ್ಕೆ ಎಷ್ಟು ಅನುದಾನ ಕೊಟ್ಟಿದ್ದಾರೆ ಎಂದು ಬಹಿರಂಗವಾಗಿ ಹೇಳಿಕೆ ನೀಡಲಿ ಅವರ ಅವಧಿಯಲ್ಲಿ ಒಂದುವರೆ ವರ್ಷ ಇರುವಾಗಲೆ ತನ್ನ ರಾಜಕೀಯ ಸ್ವಾರ್ಥಕ್ಕೆ ರಾಜಿನಾಮೆ ನೀಡಿದ ಮಾಹಾನುಭಾವರು ಇವರು ಇಂತವರಿಗೆ ಟಿಕೇಟ್ ನಿಡೀದ್ದು ಎಷ್ಟು ಸರಿ .ಎಂದು ಆಯನೂರು ಮಂಜುನಾಥ ವಿರುದ್ಧ ಟೀಕಿಸಿದರು.... ಒಟ್ಟಲ್ಲಿ ಅವರನ್ನು ನಿಲ್ಲಿಸಿದವರು ಇವರನ್ನು ಹೇಗೆ ಗೆಲ್ಲಿಸುತ್ತಾರೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು...

ವರದಿ .ರಾಘವೇಂದ್ರ ತಾಳಗುಪ್ಪ

## ಶ್ರೀ ವಿಷ್ಣು ಈಶ್ವರ ಉತ್ಸವ ಹಾಗೂ ರಂಗದ ಹಬ್ಬವನ್ನು ಭಕ್ತಿಭಾವದಿಂದ ಆಚರಣೆ

ತಾಲೂಕಿನಲ್ಲಿರುವ ಹೇಮಗಿರಿಯ ಹೇಮಾವತಿ ನದಿಯಿಂದ ಗ್ರಾಮದ ಶ್ರೀ ಶಂಭುಲಿಂಗೇಶ್ವರ ಮತ್ತು ಶ್ರೀ ವಿಷ್ಣು ಈಶ್ವರ ಉತ್ಸವ ಮೂರ್ತಿಯನ್ನು ಸಾಂಪ್ರದಾಯಿಕವಾಗಿ ನಾಟನಹಳ್ಳಿ ಮೂಡನಳ್ಳಿಯ ಮಾರ್ಗವಾಗಿ ಕರೆತಂದು ವಿಶೇಷ ಪೂಜೆ ಸಲ್ಲಿಸಿ ಒಡವೆ, ವಸ್ತ್ರ ಹಾಗೂ ವಿವಿಧ ಬಗೆಯ ಪುಷ್ಪಗಳಿಂದ ಅಲಂಕರಿಸಿ ಗ್ರಾಮಕ್ಕೆ ಕರೆತರಲಾಯಿತು. ಮಂಗಳವಾರ ಮಧ್ಯರಾತ್ರಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯ ಡೊಳ್ಳು ಕುಣಿತ ಮಂಗಳವಾದ್ಯದೊಂದಿಗೆ ವಿವಿಧ ಜಾನಪದ ಕಲಾತಂಡಗಳ ಮುಖಾಂತರ ಸ್ವಾಮಿಯ ಉತ್ಸವ ನಡೆಸಿ ಗ್ರಾಮದ ಮಧ್ಯದಲ್ಲಿರುವ ರಂಗ ಮಂಟಪದ ಬಳಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು.ಗ್ರಾಮಸ್ಥರಿಂದ ಜಾತಿಭೇದ, ವಯಸ್ಸಿನ ಅಂತರವಿಲ್ಲದೆ ಗ್ರಾಮದ ಜನರು ತಮಟೆಯ ಸದ್ದಿಗೆ ಹೆಜ್ಜೆ ಹಾಕುವ ಮೂಲಕ ಗ್ರಾಮದ ಪೂರ್ವಜರು ನಡೆಸಿಕೊಂಡು ಬಂದಿರುವ ಸಂಪ್ರದಾಯವನ್ನು ಮೆರೆದರು.ರಂಗದ ಹಬ್ಬದ ಸಂಭ್ರಮದಲ್ಲಿ ಗ್ರಾಮದ ಜನತೆಯೊಂದಿಗೆ ಸುತ್ತಮುತ್ತಲಿನ ಗ್ರಾಮದ ಜನರೂ ಪಾಲ್ಗೊಂಡಿದ್ದರು. ಗ್ರಾಮದ ರಾಜಬೀದಿಗಳು ವಿದ್ಯುತ್ ದೀಪಾಲಂಕಾರದಿಂದ ಗ್ರಾಮ ಕಂಗೊಳಿಸುತ್ತಿತ್ತು.



ಬಳಿಕ ಮಾತನಾಡಿದ ಗ್ರಾಮದ ಮುಖಂಡ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ಮಂಜುನಾಥ್ ನಮ್ಮ ಗ್ರಾಮದಲ್ಲಿ ಪೂರ್ವಜರ ಕಾಲದಿಂದಲೂ ಅರ್ಥಪೂರ್ಣವಾಗಿ ಗ್ರಾಮದ ಸರ್ವ ಸಮುದಾಯಗಳು ಸೌಹಾರ್ದತೆಯಿಂದ ಜಾತಿ ಬೇಧ ಭಾವವಿಲ್ಲದೆ ರಂಗದ ಹಬ್ಬವನ್ನು ಆಚರಿಸಿಕೊಂಡು ಬಂದಿದ್ದೇವೆ ಎಂದರು.ಕಾರ್ಯಕ್ರಮದಲ್ಲಿ ಶ್ರೀ ಶಂಬುಲಿಂಗೇಶ್ವರ ಅಭಿವೃದ್ಧಿ ಸಮಿತಿ ಅಧ್ಯಕ್ಷ ದೇವರಾಜ ಕಾರ್ಯದರ್ಶಿ ನಾಗರಾಜು,ಲಕ್ಕಪ್ಪಗೌಡ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ರವಿಕುಮಾರ್, ಲಿಂಗರಾಜು, ಮೂಡನಹಳ್ಳಿ, ನಾಟನಹಳ್ಳಿ ಗ್ರಾಮಸ್ಥರು ಭಾಗವಹಿಸಿದರು.

ಸುದ್ದಿಯೊಂದಿಗೆ ಮನು ಮಾಕವಳ್ಳಿ ಕೆ ಆರ್ ಪೇಟೆ

# ಬೀದಿ ನಾಯಿಗಳ ಹಾವಾಳಿಗೆ ಜಾನುವಾರು ಬಲಿ ಪಾಲಕನಿಗೆ ಸಂಕಷ್ಟ

ಯಳಂದೂರು: ತಾಲ್ಲೂಕಿನ ಕೊಮಾರನಪುರ ಗ್ರಾಮದಲ್ಲಿ ಬೀದಿನಾಯಿಗಳ ಹಾವಾಳಿಗೆ ಎರಡು ವರ್ಷದ ಕರುವೊಂದು ಬಲಿಯಾಗಿರುವ ಘಟನೆ ಕೊಮಾರನಪುರ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಕೊಮಾರನಪುರ ಗ್ರಾಮದ ಮಹದೇವಯ್ಯ ಎಂಬುವರಿಗೆ ಸೇರಿದ ಎರಡು ವರ್ಷದ ಕರುವನ್ನು ಬೀದಿನಾಯಿಗಳು ಕಚ್ಚಿ ಎಳೆದಾಡಿ ತಿಂದು ಸಾಯಿಸಿರುವ ಘಟನೆ ನಡೆದಿದೆ.

ಎಂದಿನಂತೆ ಕರುವನ್ನು ಕೊಟ್ಟಿಯಲ್ಲಿ ಕಟ್ಟಿದ್ದು . ಕಟ್ಟಿರುವ ಜಾಗದಲ್ಲೆ ಬೀದಿನಾಯಿಗಳು ಕರುವನ್ನು ಕಚ್ಚಿ ಕೊಂದಿವೆ ಕರುವಿನ ಕರಳು



ಜಠರ ಮುಂತಾದ ಒಳಭಾಗಗಳು ಹೊರಬಂದಿದ್ದು ಕರುವು ಸಾವನ್ನಪ್ಪಿದೆ.

ಮಹದೇವಯ್ಯನವರ ಕುಟುಂಬವು ಪೂರ್ವಜರ ಕಾಲದಿಂದಲೂ ದನಕರುಗಳನ್ನು ಸಾಕಿಕೊಂಡು ಬಂದಿದ್ದು. ದನಕರು ಮೇಯಿಸುವುದೆ ಇವರ ಕಾಯಕವಾಗಿತ್ತು ಆದರೆ ಕರುವನ್ನು ನಾಯಿಗಳು ಎಳೆದು ಕಚ್ಚಿ ಸಾಯಿಸಿರುವುದರಿಂದ ಇನ್ನುಳಿದ ದನಕರುಗಳ ಗತಿಯೇನೆಂದು ಪಾಲಕರು ಚಿಂತೆಗೀಡಾಗಿದ್ದಾರೆ.

ನಾಯಿಗಳ ಹಾವಾಳಿ ಇದೇ ಮೊದಲೇನಲ್ಲ. ಸುಮಾರು ಎರಡು ವರ್ಷಗಳಿಂದಲೂ ನಾಯಿಗಳ ಹಾವಾಳಿ ಹೆಚ್ಚಾಗಿದ್ದು ಈ ಬೀದಿನಾಯಿಗಳ ಹಾವಾಳಿಗೆ ಈ ಮನೆತನದ ಕರುಗಳು ಸುಮಾರು ಹತ್ತು ಕರುಗಳು ಬಲಿಯಾಗಿವೆ ಎನ್ನುತ್ತಾರೆ ಮಹದೇವಯ್ಯ

ಈ ಘಟನೆಯ ಸಂಬಂಧವಾಗಿ ಪಶುಪಾಲನೆ ಇಲಾಖೆ ಹಾಗೂ ಗ್ರಾಮಪಂಚಾಯಿತಿಯ ಯಾವೊಬ್ಬ ಅಧಿಕಾರಿಯು ಸ್ಥಳಕ್ಕೆ ಬೇಟಿನೀಡದೆ ಇರುವುದು ಅಧಿಕಾರಿಗಳ ನಿರ್ಲಕ್ಷ್ಯತನದಿಂದಾಗಿ ಎಂಬುದು ಸಾರ್ವಜನಿಕರ ಆಕ್ರೋಶವಾಗಿದೆ.

ವರದಿ ಆರ್ ಉಮೇಶ್ ಮಲಾರಪಾಳ್ಯ

MUNJANEVARTHE KANNADA DAILY, EDITOR, PRINTER PUBLISHED And OWNED BY H.L.Amaranth, and Printed at: Sree Manjunatha enterprises, No.30Subbannachan Lane 1st Cross, Cottenpet Bangalore-560053, MOB: 91414 14119 Published at: No.97, 2nd Cross, Vivekananda Nagar, Khadi commision layout, BSK 3rd Stage, Katharaguppe Main Road, Bangalore 560085